# ಆನಂದ ಕೋ-ಆಪರೇಟಿವ್ ಬ್ಯಾಂಕ್ ಲಿ.

## ಬ್ಯಾಂಕಿನ ಸಂಸ್ಥಾಪಕರು

1. ಶ್ರೀ ಎಸ್. ಪುಟ್ಟಸ್ವಾಮಿ
2. ಶ್ರೀ ಎಲ್. ಶಿವಲಿಂಗಯ್ಯ
3. ಡಾ|| ಎನ್.ಟಿ. ಮೋಹನ್
4. ಶ್ರೀ ಎಂ.ಹೆಚ್. ಜಯಪ್ರಕಾಶ್ ನಾರಾಯಣ
5. ಶ್ರೀ ಪಿ.ಎಲ್. ನಂಜುಂಡ ಸ್ವಾಮಿ
6. ಶ್ರೀ ಸಿ.ಡಿ. ಆದಿನಾರಾಯಣ
7. ಶ್ರೀ ಎಸ್. ಗುರಪ್ಪಾಜಿ
8. ಶ್ರೀ ಎ.ಡಿ. ಕುಬೇರಪ್ಪ
9. ಶ್ರೀ ಹೆಚ್.ಎಸ್. ಶಿವಸ್ವಾಮಿ
10. ಶ್ರೀ ಬಿ. ಗೋಪಾಲಯ್ಯ
11. ಶ್ರೀ ಡಿ.ಆರ್. ನಂಜಯ್ಯ
12. ಶ್ರೀ ಎಸ್. ನಂಜಯ್ಯ
13. ಶ್ರೀ ಎಂ.ಕೆ. ಕೆಂಪಸಿದ್ದಯ್ಯ
14. ಶ್ರೀ ಕೆ.ಎಲ್. ಜಯಶಂಕರ್
15. ಶ್ರೀ ಕೆ. ದೊಡ್ಡವೀರಯ್ಯ

## ಕಾರ್ಯ ನಿರ್ವಾಹಕ ಮಂಡಲಿ

| | | |
|---|---|---|
| 1. | ಶ್ರೀ. ದೊಡ್ಡೀರಯ್ಯ ಸಿ. | ಅಧ್ಯಕ್ಷರು |
| 2. | ಶ್ರೀ. ರುದ್ರಯ್ಯ ಕೆ. ಎಸ್. | ಉಪಾಧ್ಯಕ್ಷರು |
| 3. | ಶ್ರೀ. ಸಿದ್ದರಾಜ ಎಸ್. | ನಿರ್ದೇಶಕರು |
| 4. | ಶ್ರೀ. ಚಂದ್ರಶೇಖರಯ್ಯ | ನಿರ್ದೇಶಕರು |
| 5. | ಶ್ರೀ. ಸಿದ್ದರಾಜು ಸಿ. | ನಿರ್ದೇಶಕರು |
| 6. | ಶ್ರೀ. ಪುಟ್ಟಮಾದಯ್ಯ ಬಿ. | ನಿರ್ದೇಶಕರು |
| 7. | ಶ್ರೀ. ನಂದಕುಮಾರ್ ಎಂ. ಸಿ. | ನಿರ್ದೇಶಕರು |
| 8. | ಶ್ರೀ. ರಾಜ ಜೆ. | ನಿರ್ದೇಶಕರು |
| 9. | ಶ್ರೀ. ರಾಚಯ್ಯ ಸಿ. | (ಪ. ಜಾ. ಮೀ.) ನಿರ್ದೇಶಕರು |
| 10. | ಡಾ|| ಪ್ರಶಾಂತ್ ಪಿ. | (ಪ. ಪ. ಮೀ.) ನಿರ್ದೇಶಕರು |
| 11. | ಶ್ರೀಮತಿ. ಅರುಂಧತಿ ಎಲ್. | (ಮಹಿಳಾ ಮೀ.) ನಿರ್ದೇಶಕರು |
| 12. | ಶ್ರೀ. ಧನಂಜಯ ಕೆ. ಹೆಚ್. | (ಹಿ. ಮೀ) ನಿರ್ದೇಶಕರು |
| 13. | ಶ್ರೀ. ಕೇಶವ ರಾವ್ | (ಹಿ. ಮೀ) ನಿರ್ದೇಶಕರು |
| 14. | ಶ್ರೀ. ಸಿ. ಮಹದೇವಯ್ಯ | ವೃತ್ತಿಪರ ನಿರ್ದೇಶಕರು |
| 15. | ಶ್ರೀ ಕೆ. ಜನಾರ್ಧನ | ಮುಖ್ಯ ಕಾರ್ಯ ನಿರ್ವಹಣಾಧಿಕಾರಿ |
| 16. | ಶ್ರೀ ಹೆಚ್.ಎಸ್. ಸತ್ಯನಾರಾಯಣ | ಸಲಹೆಗಾರರು |

## ಭಾವ ಪೂರ್ಣ ಶ್ರದ್ಧಾಂಜಲಿ

## 30–06–2024



**ಶ್ರೀ ಗಂಗಾಧರಯ್ಯ**
ನಿರ್ದೇಶಕರು

ಸ್ಥಾಪನೆ: 1979

ಫೋನ್: ಪ್ರ.ಕ. : 2344 7829
ಬಸವೇಶ್ವರನಗರ ಶಾಖೆ : 2350 1843
ಎ.ಎಂ.ಸಿ. ಶಾಖೆ : 2365 8484
ಶೇಷಾದ್ರಿಪುರಂ ಶಾಖೆ : 2346 8214

# ಆನಂದ ಕೋ-ಆಪರೇಟಿವ್ ಬ್ಯಾಂಕ್ ಲಿ.

ಆಡಳಿತ ಕಛೇರಿ, ನಂ.116, 1ನೇ ಮಹಡಿ, 2ನೇ ಮುಖ್ಯರಸ್ತೆ, ಶೇಷಾದ್ರಿಪುರಂ, ಬೆಂಗಳೂರು – 560 020
email: anandacb_1979@yahoo.com, headoffice@acobl.com
www.acobl.com

## 43ನೇ ವಾರ್ಷಿಕ ಸಾಮಾನ್ಯ ಸಭೆಯ ಸೂಚನಾಪತ್ರ

ಮಾನ್ಯ ಸದಸ್ಯರೇ,

ದಿನಾಂಕ 22-09-2024ನೇ ಭಾನುವಾರದಂದು ಬೆಳಿಗ್ಗೆ 10-00 ಘಂಟೆಗೆ ಸರಿಯಾಗಿ 2023-24ರ 43ನೇ ವಾರ್ಷಿಕ ಸಾಮಾನ್ಯ ಸಭೆಯನ್ನು ಈ ಕೆಳಗಿನ ವಿಷಯಗಳ ಬಗ್ಗೆ ಚರ್ಚಿಸಿ ನಿರ್ಣಯ ಕೈಗೊಳ್ಳುವ ಸಲುವಾಗಿ ಕರೆಯಲಾಗಿದೆ. ತಾವುಗಳು ಸಕಾಲಕ್ಕೆ ಆಗಮಿಸಬೇಕಾಗಿ ಈ ಮೂಲಕ ವಿನಂತಿ.

**ಸ್ಥಳ : ಶ್ರೀ. ಆದಿಚುಂಚನಗಿರಿ ಸಮುದಾಯ ಭವನ, ಹೊಸಹಳ್ಳಿ ಮೆಟ್ರೋ ನಿಲ್ದಾಣದ ಹತ್ತಿರ, ವಿಜಯನಗರ, ಬೆಂಗಳೂರು – 560 040**.

ಅಧ್ಯಕ್ಷತೆ : **ಶ್ರೀ ಶ್ರೀ ದೊಡ್ಡೀರಯ್ಯ** ಸಿ., ಅಧ್ಯಕ್ಷರು

## ವಿಷಯಗಳು

1. ಪ್ರಾರ್ಥನೆ
2. ದೈವಾಧೀನರಾದ ಬ್ಯಾಂಕಿನ ಸದಸ್ಯರುಗಳಿಗೆ ಸಂತಾಪ ಸೂಚಿಸುವುದು.
3. ಅಧ್ಯಕ್ಷರಿಂದ ಸ್ವಾಗತ ಭಾಷಣ.
4. ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡುವುದು.

5. 2023–24ನೇ ಸಾಲಿನ 43ನೇ ವಾರ್ಷಿಕ ಸಾಮಾನ್ಯ ಸಭೆಯ ಸೂಚನಾ ಪತ್ರವನ್ನು ಓದಿ ದಾಖಲು ಮಾಡುವುದು.

6. ದಿನಾಂಕ 24–09–2023 ರಂದು ನಡೆದ 2022–23ನೇ ಸಾಲಿನ ವಾರ್ಷಿಕ ಮಹಾಸಭೆಯ ನಡವಳಿಗಳನ್ನು ಓದಿ ಧೃಡೀಕರಿಸುವುದು.

7. 2023–24 ನೇ ಸಾಲಿನ ವಾರ್ಷಿಕ ವರದಿಯನ್ನು ಪರಿಶೀಲಿಸಿ ಅಂಗೀಕರಿಸುವುದು.

8. 2023–2024ನೇ ಸಾಲಿನ ಪರಿಶೋಧಿಸಲ್ಪಟ್ಟ ಲೆಕ್ಕ ಪತ್ರಗಳನ್ನು ಪರಿಶೀಲಿಸಿ ಅಂಗೀಕರಿಸುವುದು ಹಾಗೂ ಲೆಕ್ಕ ಪರಿಶೋಧಕರ ವರದಿಗೆ ಆಡಳಿತ ಮಂಡಲಿಯು ಕೊಟ್ಟಿರುವ ಸಮಜಾಯಿಷಿಗಳನ್ನು ಅಂಗೀಕರಿಸುವುದು.

9. 2023–24 ನೇ ಸಾಲಿನ ಲಾಭದ ವಿಂಗಡಣೆ ಹಾಗೂ ವಿತರಣೆಯನ್ನು ಅಂಗೀಕರಿಸುವುದು.

10. 2024–25ನೇ ಸಾಲಿಗೆ ಆಡಳಿತ ಮಂಡಲಿ ಮಂಡಿಸಿರುವ ಅಂದಾಜು ಆಯ–ವ್ಯಯಗಳನ್ನು ಅಂಗೀಕರಿಸುವುದು ಮತ್ತು 2023–2024ನೇ ಸಾಲಿನ ಅಂದಾಜಿಗಿಂತ ಹೆಚ್ಚುವರಿಯಾಗಿರುವ ಖರ್ಚುಗಳನ್ನು ಅಂಗೀಕರಿಸುವುದು.

11. 2023–24ನೇ ಸಾಲಿನ ಲೆಕ್ಕ ಪರಿಶೋಧನೆ ಮಾಡಿದ ಲೆಕ್ಕಪರಿಶೋಧಕರ ನೇಮಕವನ್ನು ಅನುಮೋದಿಸುವುದು ಮತ್ತು 2024–25ನೇ ಸಾಲಿಗೆ ಲೆಕ್ಕಪರಿಶೋಧಕರನ್ನು ನೇಮಿಸುವುದು.

12. ಸದಸ್ಯರಿಂದ ಬಂದ ಸಲಹೆಗಳು ಮತ್ತು ವಿಷಯಗಳ ಪರಿಶೀಲನೆ.

13. ಬೈಲಾ ತಿದ್ದುಪಡಿ ಬಗ್ಗೆ

14. ಅಧ್ಯಕ್ಷರ ಅಪ್ಪಣೆಯ ಮೇರೆಗೆ ಚರ್ಚಿಸ ಬಹುದಾದ ಇತರ ವಿಷಯಗಳು.

15. ವಂದನಾರ್ಪಣೆ.

ಸ್ಥಳ: ಬೆಂಗಳೂರು
ದಿನಾಂಕ: 10–09–2024

ಆಡಳಿತ ಮಂಡಲಿ ಅಪ್ಪಣೆ ಮೇರೆಗೆ
**ಕೆ. ಜನಾರ್ಧನ**
ಮುಖ್ಯ ಕಾರ್ಯನಿರ್ವಹಣಾಧಿಕಾರಿ

## ವಿಶೇಷ ಸೂಚನೆ

1. 2023–24ನೇ ಸಾಲಿನ ಎಸ್.ಎಸ್.ಎಲ್.ಸಿ. State & ICSC Syllabus (ಶೇ 90% ಮತ್ತು ಅದಕ್ಕಿಂತ ಹೆಚ್ಚು), SSLC CBSE Syllabus (ಶೇ 70% ಮತ್ತು ಅದಕ್ಕಿಂತ ಹೆಚ್ಚು), 2ನೇ ಪಿ.ಯು.ಸಿ. ಪರೀಕ್ಷೆಯಲ್ಲಿ (ಶೇ 80% ಮತ್ತು ಅದಕ್ಕಿಂತ ಹೆಚ್ಚು) ಡಿಪ್ಲೊಮ ಮತ್ತು ಪದವಿ (ಶೇ 75% ಮತ್ತು ಅದಕ್ಕಿಂತ ಹೆಚ್ಚು) ಮತ್ತು ಪದವಿ ಸ್ನಾತಕೋತ್ತರ ಪರೀಕ್ಷೆಗಳಲ್ಲಿ (ಶೇ 70% ಮತ್ತು ಅದಕ್ಕಿಂತ ಹೆಚ್ಚು) ಅಂಕಗಳನ್ನುಗಳಿಸಿ ಉತ್ತೀರ್ಣರಾದ ಸದಸ್ಯರ ಮಕ್ಕಳಿಗೆ ನಮ್ಮ ಬ್ಯಾಂಕಿನ ಮಹಾಸಭೆಯಲ್ಲಿ ಬಹುಮಾನ ನೀಡಿ ಪ್ರತಿಭಾ ಪುರಸ್ಕಾರ ನೀಡಲಾಗುವುದು. (ವಿದ್ಯಾರ್ಥಿಗಳು ಬ್ಯಾಂಕಿನಲ್ಲಿ ಉಳಿತಾಯ ಖಾತೆ ತೆರೆಯತಕ್ಕದ್ದು) ಸದಸ್ಯರುಗಳ ಮಕ್ಕಳು ಈ ಪುರಸ್ಕಾರಕ್ಕೆ ಅರ್ಹರಾಗಿದ್ದರೆ ದೃಡೀಕೃತ ಅಂಕಪಟ್ಟಿ ಮತ್ತು ಮಕ್ಕಳ ಭಾವಚಿತ್ರವನ್ನು ಬ್ಯಾಂಕಿನಿಂದ ಪಡೆದ ನಿಗದಿತ ನಮೂನೆಯೊಂದಿಗೆ ಲಗತ್ತಿಸಿ ದಿನಾಂಕ 20–09–2024ರೊಳಗೆ ಬ್ಯಾಂಕಿನ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಯವರಲ್ಲಿ ಹೆಸರು ನೊಂದಾಯಿಸಿಕೊಳ್ಳಲು ಕೋರಲಾಗಿದೆ.

2. ಸದಸ್ಯರುಗಳು ಹಾಜರಿ ಪುಸ್ತಕದಲ್ಲಿ ಸಹಿ ಹಾಕಿ, ಸದಸ್ಯತ್ವದ ಸಂಖ್ಯೆ ಮತ್ತು ವಿಳಾಸ ಬದಲಾವಣೆ ಇದ್ದಲ್ಲಿ ಅದನ್ನು ನಮೂದಿಸತಕ್ಕದ್ದು, ಜೊತೆಗೆ ಆಧಾರ್ ಮತ್ತು ಪ್ಯಾನ್ ಕಾರ್ಡ್‌ಗಳ ಪ್ರತಿಯನ್ನು ನೀಡುವುದು.

3. ಷೇರು ಹಣ ರೂ.1,000/–ಕ್ಕಿಂತ ಕಡಿಮೆ ಇರುವ ಸದಸ್ಯರುಗಳು ತಮ್ಮ ಷೇರುಗಳನ್ನು ಕಡ್ಡಾಯವಾಗಿ ಕನಿಷ್ಠ ರೂ 1,000/–ಗಳಿಗೆ ಹೆಚ್ಚಿಸಿಕೊಳ್ಳ ಬೇಕೆಂದು ಈ ಮೂಲಕ ಕೋರಲಾಗಿದೆ.

4. ಷೇರು Certificate ಪಡೆಯದೇ ಇರುವ ಸದಸ್ಯರುಗಳು ಬ್ಯಾಂಕಿನ ಕೆಲಸದ ವೇಳೆಯಲ್ಲಿ ಬಂದು ಪಡೆದು ಕೊಳ್ಳಬೇಕಾಗಿ ವಿನಂತಿಸಲಾಗಿದೆ.

5. ಸಭೆಯಲ್ಲಿ ಭಾಗವಹಿಸಲು ಬ್ಯಾಂಕಿನಿಂದ ಪಡೆದಿರುವ ನಿಮ್ಮ ಭಾವಚಿತ್ರವಿರುವ ಗುರುತಿನ ಚೀಟಿಯನ್ನು ಕಡ್ಡಾಯವಾಗಿ ತರತಕ್ಕದ್ದು. ಗುರುತಿನ ಚೀಟಿಯನ್ನು ಪಡೆಯದೇ ಇರುವ ಸದಸ್ಯರುಗಳು ಇತ್ತೀಚಿನ ಭಾವಚಿತ್ರಗಳನ್ನು ಬ್ಯಾಂಕಿಗೆ ಕೊಟ್ಟು ಸಾಮಾನ್ಯ ಸಭೆಯ ದಿನಾಂಕಕ್ಕೆ 2 ದಿನ ಮೊದಲು ಗುರುತಿನ ಚೀಟಿಯನ್ನು ಬ್ಯಾಂಕಿನ ಕಛೇರಿ ವೇಳೆಯಲ್ಲಿ ಪಡೆದುಕೊಳ್ಳಬೇಕಾಗಿ ವಿನಂತಿ.

6. ಸದಸ್ಯರುಗಳು ವಾರ್ಷಿಕ ವರದಿ ಪುಸ್ತಕವನ್ನು ಬ್ಯಾಂಕಿನ ಕೆಲಸದ ವೇಳೆಯಲ್ಲಿ ದಿನಾಂಕ 10–09–2024 ರಿಂದ ಪಡೆದು ಸಭೆಗೆ ಬರುವಾಗ ಜೊತೆಯಲ್ಲಿ ತರಬೇಕಾಗಿ ಕೋರಲಾಗಿದೆ, ಬ್ಯಾಂಕಿಗೆ ಬರಲು ಸಾದ್ಯವಾಗದ ಸದಸ್ಯರು ಬ್ಯಾಂಕಿನ ವೆಬ್ ಸೈಟ್: www.acobl.com ಗೆ ಬೇಟಿ ನೀಡಿ ವಾರ್ಷಿಕ ವರದಿ ಪುಸ್ತಕವನ್ನು download ಮಾಡಿಕೊಳ್ಳತಕ್ಕದ್ದು.

7. ಚರ್ಚೆಗಾಗಿ ಸೂಚಿಸುವ ವಿಷಯಗಳನ್ನು ತಾ॥ 20–09–2024ಕ್ಕೆ ಮುಂಚಿತವಾಗಿ, ಮುಖ್ಯ ಕಾರ್ಯ ನಿರ್ವಹಣಾದಿಕಾರಿಯವರಿಗೆ ಲಿಖಿತ ಮುಖೇನ ಕಳುಹಿಸಬೇಕೆಂದು ಕೋರಲಾಗಿದೆ. ಆ ನಂತರ ಬಂದ ಮನವಿಗಳನ್ನು ಪರಿಗಣಿಸಲಾಗುವುದಿಲ್ಲ. ಚರ್ಚಗೆ ಸೂಚಿಸುವ ವಿಷಯಗಳು ಸಹಕಾರಿ ಕಾನೂನು ಮತ್ತು ಬ್ಯಾಂಕಿನ ಉಪ–ನಿಯಮಗಳ ಚೌಕಟ್ಟಿನೊಳಗಿರಬೇಕು..(ಮನವಿ ನೀಡದ ಹೊರತು ಸಭೆಯಲ್ಲಿ ಮಾತನಾಡಲು ಅವಕಾಶವಿರುವುದಿಲ್ಲ)

8. ಬ್ಯಾಂಕಿನ ಸದಸ್ಯರುಗಳು ಉಪ ನಿಬಂಧನೆಗಳಲ್ಲಿ ನಿರ್ದಿಷ್ಟಪಡಿಸಿದಂತೆ ಬ್ಯಾಂಕು ನೀಡುವ ಕನಿಷ್ಠ ಸೇವೆಗಳನ್ನು ಅಥವಾ ಸೌಲಭ್ಯಗಳನ್ನು ಪ್ರತಿ ವರ್ಷ ಬಳಸಿಕೊಳ್ಳಲು ತಪ್ಪಿದಲ್ಲಿ, ಅಂತಹ ಸದಸ್ಯರುಗಳಿಗೆ ಸಾಮಾನ್ಯ ಸಭೆಯಲ್ಲಿ ಮತನೀಡುವ ಹಕ್ಕಿರುವುದಿಲ್ಲ ಹಾಗೂ ಸದಸ್ಯತ್ವರದ್ದಾಗುವುದು.ಆದ್ದರಿಂದ ಸದಸ್ಯರು ಕಡ್ಡಾಯವಾಗಿ ಉಳಿತಾಯ ಖಾತೆ ತೆರೆಯತಕ್ಕದ್ದು.

9. ಸುಸ್ತಿದಾರರು ಬಾಕಿ ಇರುವ ಸಾಲವನ್ನು ಸಕಾಲದಲ್ಲಿ ಪಾವತಿಮಾಡಿ ಬ್ಯಾಂಕಿನ ಪ್ರಗತಿಗೆ ಸಹಕರಿಸಬೇಕಾಗಿ ಕೋರಲಾಗಿದೆ.

10. ಸುಸ್ತಿದಾರರಾಗಿರುವ ಸದಸ್ಯರುಗಳು ತಮ್ಮ ಸಾಲದ ಕಂತು ಮತ್ತು ಬಡ್ಡಿಯನ್ನು ಸಾಮಾನ್ಯ ಸಭೆ ನಡೆಯುವ ಮುನ್ನ 15 ದಿನಗಳೊಳಗಾಗಿ ಪಾವತಿ ಮಾಡಲು ತಪ್ಪಿದಲ್ಲಿ, ಅವರಿಗೆ ಸಹಕಾರ ಸಂಘಗಳ ಕಾನೂನು 20(2) ಎ–1ರ ಪ್ರಕಾರ ಸಭೆಯ ನಿರ್ಣಯದಲ್ಲಿ ಮತ ನೀಡಲು ಅವಕಾಶವಿರುವುದಿಲ್ಲ.

11. ಸದಸ್ಯರು ಬ್ಯಾಂಕಿನ ಲೆಕ್ಕಪತ್ರಗಳ ಬಗ್ಗೆ ಮಾತ್ರ ಚರ್ಚಿಸಬೇಕು ಬೇರೆ ಯಾವುದೇ ಅನವಶ್ಯಕ ಚರ್ಚೆಗೆ ಅವಕಾಶ ಇರುವುದಿಲ್ಲ.

12. ಸಭೆಗೆ ಹಾಜರಾಗುವ ಸದಸ್ಯರುಗಳಿಗೆ ಊಟದ ವ್ಯವಸ್ಥೆಯನ್ನು ಬೆಳಗ್ಗೆ 11.00 ಘಂಟೆಯಿಂದ ಏರ್ಪಡಿಸಲಾಗಿದೆ.

# ಆನಂದ ಕೋ-ಆಪರೇಟಿವ್ ಬ್ಯಾಂಕ್ ಲಿ.

ಬೆಂಗಳೂರು – 560 020

## "ಅಧ್ಯಕ್ಷರ ನುಡಿ"

ಆತ್ಮೀಯ ಸಹಕಾರಿ ಬಂಧುಗಳೇ,

ಬ್ಯಾಂಕಿನ 43ನೇ ಸರ್ವಸದಸ್ಯರ ಸಾಮಾನ್ಯ ಸಭೆಗೆ ತಮ್ಮೆಲ್ಲರನ್ನೂ ತುಂಬು ಹೃದಯದಿಂದ ಆತ್ಮೀಯವಾಗಿ ಸ್ವಾಗತಿಸುತ್ತೇನೆ. 2023–24ನೇ ಸಾಲಿನ ವಾರ್ಷಿಕ ವರದಿಯನ್ನು ತಮ್ಮ ಅವಗಾಹನೆಗೆ ಇಡಲು ಬಯಸುತ್ತೇನೆ.

ಕಳೆದ 45 ವರ್ಷಗಳಿಂದ ಸದಸ್ಯರಿಗೆ, ಗ್ರಾಹಕರಿಗೆ, ನಿಸ್ವಾರ್ಥ ಸೇವೆಯನ್ನು ನೀಡುವಲ್ಲಿ ಬ್ಯಾಂಕು ಸರ್ವ ದಿಶೆಯಲ್ಲಿ ಸಾಧನೆಯ ಮಟ್ಟವನ್ನು ಅತ್ಯುತ್ತಮಪಡಿಸಿಕೊಂಡು ಸಫಲವಾಗಿ ಮುನ್ನಡೆದಿದೆಯೆಂದು ಹೇಳಲು ತುಂಬಾ ಹೆಮ್ಮೆ ಎನಿಸುತ್ತದೆ.

ಪ್ರಸಕ್ತ ಹಣಕಾಸು ವರ್ಷದಲ್ಲಿ ಬ್ಯಾಂಕಿನ ಸದಸ್ಯರ ಸಂಖ್ಯೆ 8453 ಇದ್ದು ಷೇರು ಬಂಡವಾಳ ರೂ 3.00 ಕೋಟಿ ಇದೆ.

2023–24ನೇ ಸಾಲಿನ ಅಂತ್ಯಕ್ಕೆ ಕಾಯ್ದಿಟ್ಟ ನಿಧಿ ಮತ್ತು ಇತರೆ ನಿಧಿಗಳು ಒಟ್ಟು ರೂ.8.78/– ಕೋಟಿ ಇದೆ. ಈ ದೊಡ್ಡ ಪ್ರಮಾಣದ ಕಾಯ್ದಿಟ್ಟ ನಿಧಿಯ ಸಂಗ್ರಹಣೆಯು ನಮ್ಮ ಬ್ಯಾಂಕಿನಲ್ಲಿ ಇದ್ದು ಯಾವುದೇ ತುರ್ತು ಪರಿಸ್ಥಿತಿಯನ್ನು ನಿಭಾಯಿಸಲು ಸಾಮರ್ಥ್ಯ ಹೊಂದಿದೆ.

ಬ್ಯಾಂಕಿನ ಠೇವಣಾತಿಯು ಪ್ರಸಕ್ತಸಾಲಿನ ಅಂತ್ಯಕ್ಕೆ ರೂ: 81.82 ಕೋಟಿ ಇರುತ್ತದೆ. ಗ್ರಾಹಕರ ಠೇವಣಿಗಳ ಭದ್ರತೆಗೆ ಡೆಪಾಸಿಟ್ ಇನ್ಸೂರೆನ್ಸ್ ಕಾರ್ಪೋರೇಷನ್ ಜೊತೆ ಠೇವಣಿ ವಿಮಾ ಯೋಜನೆಯನ್ನು ಹೊಂದಿದ್ದು ಠೇವಣಿದಾರರ ಠೇವಣಿಗೆ ಸಂಪೂರ್ಣ ರಕ್ಷಣೆ ಇದೆ. ಆದ್ದರಿಂದ ಸದಸ್ಯರು ಬ್ಯಾಂಕಿನ ವಿವಿಧ ಠೇವಣಿಗಳ ಯೋಜನೆಯಲ್ಲಿ ಹಣ ತೊಡಗಿಸಿ ಸದುಪಯೋಗಪಡಿಸಿಕೊಳ್ಳಬೇಕಾಗಿ ವಿನಂತಿಸುತ್ತೇನೆ.

ಸಹಕಾರಿ ತತ್ವದ ಮೂಲ ಉದ್ದೇಶವಾದ ಕಾಗೆ ಆಗುಳನೊಂದಕಂಡು ಕೂಗದೆ ತನ್ನ ಕುಲವನ್ನು, ಕೋಳಿ ಗುಟುಕನೊಂದಕಂಡು, ಕರೆಯದೆ ತನ್ನ ಬಳಗವನ್ನು ಎಂಬ ಬಸವಣ್ಣನವರ ಸಹಕಾರ ತತ್ವದ ಆಶಯದಂತೆ "ಪರಸ್ಪರ ಸಹಕಾರ ಪರಸ್ಪರ ಅಭಿವೃದ್ಧಿ"ಗೆ ಅನುಗುಣವಾಗಿ ಬ್ಯಾಂಕು ಎಲ್ಲಾ ವರ್ಗದ ಸದಸ್ಯರಿಗೆ, ವಿವಿಧ, ಉದ್ದೇಶಗಳಿಗೆ ಸಾಲವನ್ನು ನೀಡುತ್ತಾ ಬಂದಿರುವುದು. ಅರ್ಹ ಸದಸ್ಯರಿಗೆ ಬೆಂಗಳೂರಿನ ಎಲ್ಲಾ ಪ್ರದೇಶಗಳಲ್ಲಿ ಮನೆ ಕಟ್ಟಲು ಕಟ್ಟಿರುವ ಮನೆಗಳ ಮೇಲೆ ಸಾಲ ನೀಡುತ್ತಿದ್ದು ಸದಸ್ಯರ ಏಳಿಗೆಗೆ ಮತ್ತು ಅವರ ಕನಸುಗಳಿಗೆ ನಮ್ಮ ಬ್ಯಾಂಕು ಸ್ಪಂದಿಸಿ ಆರ್ಥಿಕ ನೆರವನ್ನು ನೀಡುತ್ತಾ ಬಂದಿರುತ್ತದೆ. ವಾಹನ ಸಾಲ, ಚಿನ್ನಾಭರಣಗಳ ಸಾಲ, ಜಾಮೀನು ಸಾಲ, ಅಡಮಾನಸಾಲ, ಚಾಲ್ತಿಖಾತೆ ಮೇಲೆ ಮೀರಳತೆ ಸಾಲ, ನೀಡಲಾಗುತ್ತಿದೆ. ಎಲ್ಲಾ ಅರ್ಹ ಸದಸ್ಯರಿಗೆ ಆರ್ಥಿಕ ನೆರವು ನೀಡುವಲ್ಲಿ ಪ್ರಮಾಣಿಕ ಪ್ರಯತ್ನ ಮಾಡಲಾಗಿದೆ.

ಸದಸ್ಯ ಭಾಂಧವರು ತಾವು ಪಡೆದ ಆರ್ಥಿಕ ನೆರವನ್ನು ನಿಗದಿತ ಉದ್ದೇಶಕ್ಕಾಗಿ ವಿನಿಯೋಗಿಸಿ ಕೊಳ್ಳಬೇಕೆಂದು ವಿನಂತಿಸುತ್ತೇನೆ. ಅದೇ ರೀತಿ ಮರುಪಾವತಿಯನ್ನು ಪ್ರಮಾಣಿಕವಾಗಿ ಮಾಡುತ್ತೀರೆಂದು ನಂಬಿದ್ದೇವೆ. ಸಾಲವನ್ನು ಕೊಂಬಾಗ, ಹಾಲುಗೊರ ಉಂಡಂತೆ ಸಾಲಿಗನು ಬಂದು ಎಳೆವಾಗ ಕಿಬ್ಬಂದಿಯ ಕೀಲು ಮುರಿದಂತೆ ಸರಿಯಾದ ಸಮಯಕ್ಕೆ ಮರುಪಾವತಿ ಎಂಬ ಸರ್ವಜ್ಞನ ವಚನದಂತೆ ಮಾಡಬೇಕು.

ಪ್ರಸಕ್ತ ಸಾಲಿನಲ್ಲಿ ಸಾಲ ಮತ್ತು ಮುಂಗಡಗಳ ಅಡಿಯಲ್ಲಿ ಮನೆಕಟ್ಟಲು ಮತ್ತು ಸ್ಥಿರಾಸ್ತಿ ಅಡಮಾನ ಸಾಲ ರೂ. 38.35 ಕೋಟಿ, ಚಿನ್ನಾಭರಣಗಳ ಮೇಲೆ ರೂ. 11.31 ಕೋಟಿ, ವಾಹನಗಳ ಮೇಲೆ ರೂ 0.53 ಕೋಟಿ, ಜಾಮೀನು ಸಾಲ ರೂ 4.11 ಕೋಟಿ ಇತರೆ ಸಾಲಗಳು ರೂ. 1.01 ಕೋಟಿ ಈ ರೀತಿ ಒಟ್ಟು ರೂ 55.31 ಕೋಟಿ ಹಣ ವಿತರಿಸಲಾಗಿದೆ.

ಸಾಲ ವಸೂಲಾತಿ ಪ್ರಗತಿಯನ್ನು ಬ್ಯಾಂಕಿನ ಆಡಳಿತ ಮಂಡಲಿಯ ಪ್ರತಿ ಸಭೆಯಲ್ಲಿ ಸೂಕ್ಷವಾಗಿ ಅವಲೋಕಿಸಿ, ಕೂಲಂಕುಷವಾಗಿ ಚರ್ಚಿಸಿ ಕಾಲಕಾಲಕ್ಕೆ ಸಿಬ್ಬಂದಿಗಳಿಗೆ ಸೂಕ್ತ ನಿರ್ದೇಶನಗಳನ್ನು ನೀಡುತ್ತಿರುವುದು. ಬ್ಯಾಂಕಿನ ಆಡಳಿತ ಮಂಡಲಿ ಸದಸ್ಯರು ಹಾಗೂ ಎಲ್ಲಾ ಸಿಬ್ಬಂದಿ ವರ್ಗದವರು ಮಂಡಲಿ ಸಭೆಯ ನಿರ್ಧಾರ ಮತ್ತು ನಿರ್ದೇಶನಗಳನ್ನು ಶ್ರದ್ಧೆಯಿಂದ ಜವಾಬ್ದಾರಿಯುತವಾಗಿ ಅನುಷ್ಠಾನಕ್ಕೆ ತಂದು ಪ್ರಸಕ್ತ ಸಾಲಿನ ನಿವ್ವಳ ಎನ್.ಪಿ.ಎ. ಪ್ರಮಾಣವನ್ನು ಶೇ 0% ರಷ್ಟು ಕನಿಷ್ಠ ಮಿತಿಯಲ್ಲಿ ಕಾಪಾಡಿಕೊಂಡು ಬರಲಾಗಿದೆ.

ಈ ದಿಶೆಯಲ್ಲಿ ಶ್ರಮ ವಹಿಸಿ ಕ್ರಮ ಜರುಗಿಸಲು ಸಹಕರಿಸಿದ ಆಡಳಿತ ಮಂಡಲಿ ಸದಸ್ಯರಿಗೆ ಹಾಗೂ ಸಿಬ್ಬಂದಿ ವರ್ಗಕ್ಕೂ ಕೃತಜ್ಞತೆ ಸಲ್ಲಿಸುತ್ತೇನೆ.

ಬ್ಯಾಂಕಿನ 2023–24 ಸಾಲಿನ ವಹಿವಾಟು ರೂ.1,294.39 ಕೋಟಿ ದಾಟಿದೆ, 2023–24ನೇ ಸಾಲಿನ ಅಂತ್ಯಕ್ಕೆ ದುಡಿಯುವ ಬಂಡವಾಳ ರೂ. 97.83 ಕೋಟಿ ಇದ್ದು, ಪ್ರಸಕ್ತ ಸಾಲಿನಲ್ಲಿ ಬ್ಯಾಂಕು ರೂ. 75.03 ಲಕ್ಷ ನಿವ್ವಳ ಲಾಭಗಳಿಸಿದ್ದು. ಬ್ಯಾಂಕ್‌ನ ಆಡಿಟ್ ವರ್ಗೀಕರಣ 'ಎ' ದರ್ಜೆಯಲ್ಲಿದೆ. ಪ್ರಸಕ್ತ ವಾರ್ಷಿಕ ವರ್ಷದಲ್ಲಿ ಡಿವಿಡೆಂಡ್ ನೀಡಲು ಹಾಗು ಸದಸ್ಯ ಭಾಂಧವರ ಮಕ್ಕಳಿಗೆ ಪ್ರತಿ ವರ್ಷದಂತೆ ವಿದ್ಯಾರ್ಥಿ ಪ್ರತಿಭಾ ಪುರಸ್ಕಾರ ನೀಡಲು ಹರ್ಷಿಸುತ್ತೇನೆ.

"ಬೆಳಕಿನ ಹಾದಿಯಲ್ಲಿ ನಡೆಯಲು ಪ್ರಯತ್ನಿಸಬಹುದು ಆದರೆ ಕನಸುಗಳಿಲ್ಲದ ಹಾದಿಯಲ್ಲಿ ನಡೆಯಲಾಗುವುದಿಲ್ಲ" ಅಂದರೆ ಪ್ರಗತಿಗೆ ಅಭಿವೃದ್ಧಿಗೆ ಪೂರ್ವಕವಾದ ದೂರದೃಷ್ಟಿಯ ಯೋಜನೆಗಳು ಇರಬೇಕು ಎಂಬ ಆಶಯದಂತೆ.

**ಬ್ಯಾಂಕಿನ ಗ್ರಾಹಕರ ಅನುಕೂಲಕ್ಕಾಗಿ ಈ ಕೆಳಕಂಡ ಸೌಲಭ್ಯ ಹಾಗೂ ಸೇವೆಗಳನ್ನು ಕಲ್ಪಿಸಲಾಗಿದೆ.**

1) ಬ್ಯಾಂಕಿನಲ್ಲಿ ಸೇಫ್ ಡಿಪಾಸಿಟ್ ಲಾಕರ್ ಸೌಲಭ್ಯವಿದೆ.
2) ಭದ್ರತೆ ದೃಷ್ಠಿಯಿಂದ ಎಲ್ಲಾ ಶಾಖೆಗಳಿಗೆ ಸಿ.ಸಿ.ಟಿ.ವಿ. ಅಳವಡಿಸಲಾಗಿದೆ.
3) ಸಿ.ಟಿ.ಎಸ್. ತೀರುವಳಿ ವ್ಯವಸ್ಥೆ ಮಾಡಲಾಗಿದೆ.
4) ಇ–ಸ್ಟಾಂಪಿಗ್ ವ್ಯವಸ್ಥೆ ಮಾಡಲಾಗಿದೆ.
5) ರೂ 3.0 ಲಕ್ಷದವರೆಗೆ ಜಾಮೀನು ಸಾಲದ ವ್ಯವಸ್ಥೆ.
6) ಎಲ್ಲ ಗ್ರಾಹಕರಿಗೆ ಬ್ಯಾಂಕಿನ ವಿವರ ಪಡೆಯಲು ಅನುಕೂಲವಾಗುವಂತೆ ಬ್ಯಾಂಕಿನ ವೆಬ್‌ಸೈಟ್ ಸೌಲಭ್ಯ ಒದಗಿಸಲಾಗಿದೆ. www.acobl.com
7) ಗ್ರಾಹಕರ ಅನುಕೂಲಕ್ಕಾಗಿ R.T.G.S/N.E.F.T ಸೌಲಭ್ಯ ಕಲ್ಪಿಸಲಾಗಿದೆ.

**ಮುಂದಿನ ದಿನಗಳಲ್ಲಿ ಈ ಕೆಳಗಿನ ಕಾರ್ಯ ಯೋಜನೆಗಳನ್ನು ಹಮ್ಮಿಕೊಳ್ಳಲಾಗಿದೆ.**

1) ಬ್ಯಾಂಕನ್ನು ಭಾರತೀಯ ರಿಸರ್ವ್ ಬ್ಯಾಂಕಿನವರ 'ಎ' ಶ್ರೇಣಿಗೆ ತರುವುದು.
2) ದುಡಿಯುವ ಬಂಡವಾಳ ರೂ.97.83 ಕೋಟಿ ಇದ್ದು ಇದನ್ನು ಮುಂದಿನ ದಿನಗಳಲ್ಲಿ 120 ಕೋಟಿಗೆ ಹೆಚ್ಚಿಸುವುದು.

3) ರೂ 1.25 ಕೋಟಿಗಿಂತ ಹೆಚ್ಚಿನ ಲಾಭ ಗಳಿಸುವುದು.

4) ಮುಂದಿನ ವರ್ಷಗಳಲ್ಲಿ ಕೂಡ Net NPA ಪ್ರಮಾಣವನ್ನು 0%ಲ್ಲೆ ನಿರ್ವಹಣೆ ಮಾಡಲಾಗುವುದು.

5) ಠೇವಣಿಯನ್ನು 100 ಕೋಟಿ ರೂ. ಗಳಿಗೆ ಹೆಚ್ಚಿಸುವುದು.

6) ಸಾಲ ಮತ್ತು ಮುಂಗಡಗಳನ್ನು 70 ಕೋಟಿ ರೂಗಳಿಗೆ ಹೆಚ್ಚಿಸುವುದು.

7) ಹೆಚ್.ಬಿ.ಆರ್ ಬಡಾವಣೆಯಲ್ಲಿ ಇರುವ ಬ್ಯಾಂಕಿನ ನಿವೇಶನದಲ್ಲಿ ಕಟ್ಟಡ ನಿರ್ಮಾಣ ಮಾಡಿದ್ದು ಶೀಘ್ರದಲ್ಲಿಯೇ ಗ್ರಾಹಕರಿಗೆ ಅನುಕೂಲವಾಗುವಂತೆ ಆರ್.ಬಿ.ಐ. ನಿಯಮಾವಳಿಯಂತೆ ಹೊಸ ಶಾಖೆ ತೆರೆಯಲಾಗುವುದು ಅಥವಾ AMC ಶಾಖೆಯನ್ನು ಸ್ಥಳಾಂತರಿಸಲು ಕ್ರಮವಿಡಲಾಗುವುದು.

8) ಬ್ಯಾಂಕಿನ ಗ್ರಾಹಕರ ಅನುಕೂಲಕ್ಕಾಗಿ ಎ.ಟಿ.ಎಂ ಸೌಲಭ್ಯದ ವ್ಯವಸ್ಥೆ ಮಾಡಲಾಗುವುದು.

"ಸರ್ವರಿಗೂ ಸಮಪಾಲು ಸರ್ವರಿಗೂ ಸಮಬಾಳು" ಎಂಬ ಗಾಂಧಿಜಿಯವರ ತತ್ವದಂತೆ.

ಈ ಎಲ್ಲಾ ಯೋಜನೆಗಳನ್ನು ಸಕಾರಗೊಳಿಸಲು ಗೌರವಾನ್ವಿತ ಸದಸ್ಯರುಗಳು ಹಾಗೂ ಗ್ರಾಹಕರುಗಳು ವಿವಿಧ ಯೋಜನೆಯ ಠೇವಣಿಗಳಲ್ಲಿ ಹಣತೊಡಗಿಸಿ ಬ್ಯಾಂಕಿನ ಅಭಿವೃದ್ಧಿಗೆ ಕಾರಣಕರ್ತರಾಗಬೇಕಾಗಿ ಮತ್ತು ಸಲಹೆ ಸೂಚನೆಗಳನ್ನು ನೀಡಿ ಬ್ಯಾಂಕು ಅಭಿವೃದ್ಧಿ ಪಥದಲ್ಲಿ ಸಾಗಲು ಸಹಕರಿಸಬೇಕಾಗಿ ಕೋರುತ್ತೇನೆ. ಸದಸ್ಯರುಗಳಿಗೆ ಈಗಾಗಲೆ ತಿಳಿಸಿರುವ ಹಾಗೆ ಬ್ಯಾಂಕಿನ ಪರಿಷ್ಕೃತ ಬೈಲಾ ಪ್ರಕಾರ ಪ್ರತಿಯೊಬ್ಬ ಸದಸ್ಯರು ಹೊಂದಿರತಕ್ಕ ಕನಿಷ್ಠ ಷೇರು ರೂ 1,000–00ಗಳಾಗಿರುತ್ತದೆ ಮತ್ತು ಸದಸ್ಯರು ತಮ್ಮ ಚಾಲ್ತಿ ಖಾತೆ ಅಥವಾ ಉಳಿತಾಯ ಖಾತೆಯಲ್ಲಿ ವರ್ಷದಲ್ಲಿ ಕನಿಷ್ಟ ವ್ಯವಹಾರಗಳನ್ನು ಮಾಡಬೇಕಾಗಿರುವುದು ಕಡ್ಡಾಯವಾಗಿರುತ್ತದೆ. ಆದುದರಿಂದ ತಮ್ಮಲ್ಲಿ ಮತ್ತೊಮ್ಮೆ ವಿನಂತಿಸುತ್ತಾ ಕನಿಷ್ಠ ರೂ. 1,000–00 ಷೇರು ಇಲ್ಲದವರು ಶೀಘ್ರದಲ್ಲಿ ಬಾಕಿ ಇರುವ ಷೇರು ಹಣವನ್ನು ಪಾವತಿಸಲು ಮತ್ತು ಚಾಲ್ತಿ ಖಾತೆ ಅಥವಾ ಉಳಿತಾಯ ಖಾತೆ ಹೊಂದಿಲ್ಲದ ಸದಸ್ಯರುಗಳು ಖಾತೆಗಳನ್ನು ತೆರೆದು ವ್ಯವಹರಿಸಿ ಬ್ಯಾಂಕಿನ ಪ್ರಗತಿಗೆ ಸಹಕರಿಸುವಂತೆ ಕೋರುತ್ತೇನೆ.

ಕಾಲಕಾಲಕ್ಕೆ ಉತ್ತಮ ಸಲಹೆ, ಮಾರ್ಗದರ್ಶನ, ಸಹಕಾರವನ್ನು ನೀಡುತ್ತಿರುವ ಭಾರತೀಯ ರಿಸರ್ವ್ ಬ್ಯಾಂಕ್, ಸಹಕಾರ ಇಲಾಖೆ, ಲೆಕ್ಕಪರಿಶೋಧನಾ ಇಲಾಖೆಯವರುಗಳಿಗೆ, ಹಣಕಾಸಿನ ವಹಿವಾಟಿಗೆ ಸಹಕರಿಸುತ್ತಿರುವ ಕೆ.ಎಸ್.ಸಿ. ಅಪೆಕ್ಸ್ ಬ್ಯಾಂಕ್ ಲಿ. ಆಕ್ಸಿಸ್ ಬ್ಯಾಂಕ್, ಇಂಡಸ್ ಇಂಡ್ ಬ್ಯಾಂಕ್, ಐ.ಡಿ.ಬಿ.ಐ. ಶ್ಯಾಮರಾವ್ ವಿಠ್ಠಲ್ ಕೊ–ಆಪರೇಟಿವ್ ಬ್ಯಾಂಕ್ ಲಿ, ರವರಿಗೆ ಮತ್ತು ಪ್ರಸಕ್ತ ಸಾಲಿನ ನಮ್ಮ ಬ್ಯಾಂಕಿನ ಲೆಕ್ಕಪರಿಶೋಧನೆ ಮಾಡಿ ವರದಿ ನೀಡಿರುವ ಮೇ॥ ಎಂ.ಎನ್.ಎಸ್. ಮತ್ತು ಕಂ. ಸ್ಥಿರಾಸ್ತಿ ಸಾಲ ಮಂಜೂರಾತಿ ನೀಡಲು ಕಾನೂನು ಸಲಹೆ ನೀಡುತ್ತಿರುವ ಕಾನೂನು ಸಲಹೆಗಾರರಿಗೆ, ಸ್ಥಿರಾಸ್ತಿ ಮೌಲ್ಯಮಾಪಕರಿಗೆ, ಆಡಳಿತ ಮಂಡಲಿ ಸದಸ್ಯರುಗಳಿಗೆ ಹಾಗೂ ಬ್ಯಾಂಕಿನ ಸಲಹೆಗಾರರಿಗೆ, ಸಿಬ್ಬಂದಿ ವರ್ಗದವರಿಗೆ, ಗೌರವಾನ್ವಿತ ಸಹಕಾರ ಸದಸ್ಯ ಬಾಂದವರಿಗೆ, ಆತ್ಮೀಯ ಗ್ರಾಹಕರಿಗೆ, ಹಿತೈಷಿಗಳಿಗೆ ನನ್ನ ವೈಯಕ್ತಿಕವಾಗಿ ಹಾಗೂ ಆಡಳಿತ ಮಂಡಲಿಯ ಪರವಾಗಿ ಕೃತಜ್ಞತೆ ಸಲ್ಲಿಸುತ್ತೇನೆ. "ಇರುವ ಕೆಲಸವ ಮಾಡು ಕಿರಿದೆನದೆ ಮನವಿಟ್ಟು ದೊರೆತದು ಹಸಾದವೆಂದುಣ್ಣು ಗೋಣಗಿಡದೆ ಧರಿಸು ಲೋಕದ ಭರವ ಪರಮಾರ್ಥವನ್ನು ಬಿಡದೆ ಹೊರಡು ಕರೆ ಬರಲ್ ಆಳದೆ ಮಂಕುತಿಮ್ಮ॥" ಇದೇ ರೀತಿಯ ತಮ್ಮೆಲ್ಲರ ಅಮೂಲ್ಯ ಸಹಕಾರ ಹಾಗೂ ಪ್ರೋತ್ಸಾಹವನ್ನು ಮುಂದೆಯೂ ನಿರೀಕ್ಷಿಸುತ್ತೇನೆ. ಮುಂದೆ ಬರುವ ಹಬ್ಬವಾದ ದಸರಾ ಮತ್ತು ದೀಪಾವಳಿ ಹಬ್ಬಕ್ಕೆ ಎಲ್ಲಾ ಸಹಸ್ಯರುಗಳಿಗೂ ಬ್ಯಾಂಕಿನ ಪರವಾಗಿ ಶುಭಾಷಯಗಳನ್ನು ಕೋರುತ್ತೇನೆ. ಜೈಹಿಂದ್ ಜೈ ಕರ್ನಾಟಕ ಜೈ ಬೀಮ್

ಆಡಳಿತ ಮಂಡಲಿಯ ಪರವಾಗಿ

**ಶ್ರೀ ದೊಡ್ಡೀರಯ್ಯ** ಸಿ.

ಅಧ್ಯಕ್ಷರು

# ಆನಂದ ಕೋ-ಆಪರೇಟಿವ್ ಬ್ಯಾಂಕ್ ಲಿ.,

ಆಡಳಿತ ಕಛೇರಿ : ನಂ. 116, 1ನೇ ಮಹಡಿ, 2ನೇ ಮುಖ್ಯರಸ್ತೆ, ಶೇಷಾದ್ರಿಪುರಂ, ಬೆಂಗಳೂರು – 560 020

## 42ನೇ ವಾರ್ಷಿಕ ಸಾಮಾನ್ಯ ಸಭೆಯ ನಡವಳಿಗಳು.

ದಿನಾಂಕ:24/09/2023 ರಂದು ಭಾನುವಾರ ಬೆಳಿಗ್ಗೆ 11.00 ಕ್ಕೆ ಹೆಚ್.ಬಿ.ಆರ್ ಬಡಾವಣೆಯಲ್ಲಿ ಇರುವ ಬ್ಯಾಂಕಿನ ನಿವೇಶನದಲ್ಲಿ ಬ್ಯಾಂಕಿನ ಗೌ॥ ಅಧ್ಯಕ್ಷರಾದ ಶ್ರೀ.ಸಿದ್ದರಾಜ.ಎಸ್. ನವರ ಅಧ್ಯಕ್ಷತೆಯಲ್ಲಿ ನಡೆದ ಬ್ಯಾಂಕಿನ 2022–23ನೇ ಸಾಲಿನ 42ನೇ ವಾರ್ಷಿಕ ಸಾಮಾನ್ಯ ಸಭೆಯ ನಡವಳಿಗಳು.

**1. ಪ್ರಾರ್ಥನೆ:**

ಕಾರ್ಯಕ್ರಮವು ಬುದ್ಧವಿಹಾರದಿಂದ ಬಂದ ಭೌದ್ದ ಬಿಕ್ಕುರವರಿಂದ ಪ್ರಾರ್ಥನೆಯೊಂದಿಗೆ ಪ್ರಾರಂಭವಾಯಿತು. ಬ್ಯಾಂಕಿನ ಅಧ್ಯಕ್ಷರು ಹಾಗು ಆಡಳಿತ ಮಂಡಳಿಯ ಎಲ್ಲಾ ಸದಸ್ಯರು ಜ್ಯೋತಿ ಬೆಳಗುವ ಮೂಲಕ 42ನೇ ವಾರ್ಷಿಕ ಮಹಾ ಸಭೆ ಪ್ರಾರಂಭವಾಯಿತು.

**2. ದೈವಾಧೀನರಾದ ಬ್ಯಾಂಕಿನ ಸದಸ್ಯರುಗಳಿಗೆ ಸಂತಾಪ ಸೂಚಿಸುವುದು:**

ಬ್ಯಾಂಕಿನ ಮುಖ್ಯಕಾರ್ಯನಿರ್ವಹಣಾಧಿಕಾರಿಯವರು 2022–23ನೇ ಸಾಲಿನಲ್ಲಿ ಪುಟ ಸಂಖ್ಯೆ 31 ಮತ್ತು 32 ರಲ್ಲಿ ಕಾಣಿಸಿರುವ 20 ಸದಸ್ಯರುಗಳ ನಿಧನದ ಸಂಗತಿಯನ್ನು ಸಭೆಗೆ ತಿಳಿಸಿ ಮೃತರ ಅಗಲಿಕೆಯಿಂದ ಆದ ದು:ಖವನ್ನು ಭರಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗದವರಿಗೆ ದೇವರು ನೀಡಲೆಂದು ಪ್ರಾರ್ಥಿಸಿ, ಮೃತರ ಆತ್ಮಕೆ ಶಾಂತಿಕೋರಿ ಎರಡು ನಿಮಿಷಗಳ ಮೌನ ಆಚರಿಸಲಾಯಿತು.

**3. ಅಧ್ಯಕ್ಷರಿಂದ ಸ್ವಾಗತ ಭಾಷಣ:**

## "ಅಧ್ಯಕ್ಷರ ನುಡಿ"

ಆತ್ಮೀಯ ಸಹಕಾರಿ ಬಂಧುಗಳೇ,

ಈ ಸುಂದರ ಬೆಳಗಿನ ಅತ್ಮೀಯ ಸಮಾರಂಭದಲ್ಲಿ ಉಪಸ್ಥಿತರಿರುವ ಎಲ್ಲರಿಗೂ ನಮಸ್ಕಾರಗಳು.

ಆನಂದ ಕೋ-ಆಪರೇಟಿವ್ ಬ್ಯಾಂಕ್‌ನ ಇತಿಹಾಸ 44ವರ್ಷದಲ್ಲಿ ಇದೊಂದು ಅವಿಸ್ಮರಣೀಯ ಸುದಿನ ಮತ್ತು ಸುಸಂದರ್ಭ ಬ್ಯಾಂಕಿನ 4ನೇ ಶಾಖೆಯ ನೂತನ ಕಟ್ಟಡ ಉದ್ಘಾಟನಾ ಸಮಾರಂಭ ಹಾಗೂ ಸರ್ವಸದಸ್ಯರ ಸಾಮಾನ್ಯ ಸಭೆಯ ಸಮಾಗಮ.

ಬೆಂಗಳೂರಿನ ಪ್ರತಿಷ್ಟಿತ ಹೆಚ್.ಬಿ.ಆರ್. ಬಡಾವಣೆಯ ಪ್ರಮುಖ ಮುಖ್ಯ ರಸ್ತೆಯಲ್ಲಿ ನಮ್ಮ ಬ್ಯಾಂಕಿಗೆ ನಿವೇಶನವನ್ನು ಖರೀದಿ ಮಾಡಿ ಇಂದು ಕಟ್ಟಡದ ಶಾಖೆ ಪ್ರಾರಂಭವಾಗಲು ಮುನ್ನುಡಿ ಬರೆದವರು ಅಂದಿನ ಅಧ್ಯಕ್ಷರಾದ ದಿವಂಗತ ಕಲ್ಕುಣಿ ಮಹದೇವಯ್ಯರವರು ಅವರ ದೂರದೃಷಿಯ ಫಲವಾಗಿ ಇಂದು ನಿಮ್ಮ ಮುಂದೆ ಈ ಶಾಖೆಯ ನೂತನ ಕಟ್ಟಡ ರೂಪುಗೊಂಡಿದೆ. ಅವರಿಗೆ ಗೌರವ ಪೂರ್ವಕವಾಗಿ ನಮನ ಸಲ್ಲಿಸುತ್ತೇನೆ.

ಹಿಂದಿನ ಸಮಾರಂಭದ ದಿವ್ಯ ಸಾನಿದ್ಯವನ್ನು ವಹಿಸಿ ನೂತನ ಕಟ್ಟಡವನ್ನು ಉದ್ಘಾಟಿಸಲು ನಮ್ಮ ಪ್ರಾರ್ಥನೆಯನ್ನು ಮನ್ನಿಸಿ ಆಗಮಿಸಿರುವ ಛಲವಾದಿ ಮಹಾಸಭಾ ಸಂಸ್ಥಾನ ಮಠದ ಪೀಠಾಧ್ಯಕ್ಷರು ನಮ್ಮೆಲ್ಲರ ಪೂಜ್ಯರಾದ ಶ್ರೀ ಶ್ರೀ ಶ್ರೀ ಬಸವನಾಗಿದೇವ ಶರಣರಿಗೆ ಬ್ಯಾಂಕಿನ ಸರ್ವಸದಸ್ಯರ ಪರವಾಗಿ ಹಾಗೂ ವೈಯಕ್ತಿಕವಾಗಿ ಪೂಜ್ಯ ಭಾವನೆಯಿಂದ ಭಕ್ತಿ ಪೂರ್ವಕವಾಗಿ ಸ್ವಾಗತ ಕೋರುತ್ತೇನೆ.

ಇಂದಿನ ಸಮಾರಂಭಕ್ಕೆ ತಡವಾಗಿ ಆಗಮಿಸುತ್ತಿರುವ ಸಾಮಾಜಿಕ ನ್ಯಾಯದ ಪ್ರತಿಪಾದಕರು ಸರಳ ಸಜ್ಜನಿಕೆಯ ವ್ಯಕ್ತಿತ್ವದ ಅಜಾತ ಶತ್ರುಯೆಂದೆ ಜನಮನ್ನಣೆ ಗಳಿಸಿರುವ ಪ್ರಖ್ಯಾತ ಶಿಕ್ಷಣ ಸಂಸ್ಥೆ ತುಮಕೂರಿನ ಸಿದ್ದಾರ್ಥ ಶಿಕ್ಷಣ ಸಂಸ್ಥೆಯ ಸಂಸ್ಥಾಪಕರು ಶಿಕ್ಷಣ ಬೀಷ್ಮ ಎಂದೇ ಕಿರ್ತಿಯನ್ನು ಪಡೆದಿರುವ ದಿ॥ ಗಂಗಾಧರಯ್ಯರವರ ಸುಪುತ್ರರು ಹಾಗೂ ಕರ್ನಾಟಕ ರಾಜ್ಯ ಸರ್ಕಾರದ ಮಾನ್ಯ ಗೃಹ ಸಚಿವರಾದ ಸನ್ಮಾನ್ಯ ಡಾ॥ ಜಿ. ಪರಮೇಶ್ವರ್ ರವರು ತಡವಾಗಿ ಬರಬಹುದು ಅವರಿಗೂ ಬ್ಯಾಂಕಿನ ಪರವಾಗಿ ಹಾಗೂ ನನ್ನ ವೈಯಕ್ತಿಕವಾಗಿ ಹೃದಯ ಪೂರ್ವಾಕವಾಗಿ ಸ್ವಾಗತ ಬಯಸುತ್ತೇನೆ.

ಸಹಕಾರಿ ದುರೀಣರು ನೇರ ನಡೆ ನುಡಿಯುವ ವ್ಯಕ್ತಿತ್ವದ ದೀಮಂತರು ಸಹಕಾರಿ ಕ್ಷೇತ್ರದಲ್ಲಿ ಕಳೆದ ಹಲವು ದಶಕಗಳಿಂದ ತಮ್ಮ ಅನುಪಮ ಸೇವೆಯ ಮೂಲಕ ನಾಡಿನಾದ್ಯಂತ ಜನಪರ ಸಮಾಜಮುಖಿ ಕ್ಷೇತ್ರಗಳಲ್ಲಿ ವಿಶೀಷ್ಠ ಛಾಪು ಮೂಡಿಸಿರುವ ಸಹಕಾರ ರತ್ನ ಕರ್ನಾಟಕ ಸರ್ಕಾರದ ಮಾನ್ಯ ಸಚಿವರಾದ ಶ್ರಿಯುತ ಕೆ.ಎನ್. ರಾಜಣ್ಣರು ತಡವಾಗಿ ಆಗಮಿಸಲಿದ್ದಾರೆ ಅವರಿಗೂ ಬ್ಯಾಂಕಿನ ಪರವಾಗಿ ಮತ್ತು ವೈಯಕ್ತಿಕವಾಗಿ ಹೃದಯ ಪೂರ್ವಕವಾಗಿ ಸ್ವಾಗತ ಬಯಸುತ್ತೇನೆ.

ಡಾ॥ ಬಿ.ಆರ್. ಅಂಬೇಡ್ಕರ್ ಪರಿಣಿತ ಭಾರತದ ಸಂವಿಧಾನದ ಮೂಲ ಆಶಯಗಳಿಗೆ ಬದ್ದರಾಗಿ ತಾವು ಹೊಂದಿರುವ ಸಮಾಜ ಕಲ್ಯಾಣ ಇಲಾಖೆಯ ಮೂಲಕ ಸಮಾಜದ ಕಟ್ಟಕಡೆಯ ವ್ಯಕ್ತಿಗೆ ಮೂಟ್ಟಮೊದಲ ಆದ್ಯತೆ ಸಿಗಬೇಕು ಎಂಬ ಸದಾಶಯದ ಮೂಲಕ ದಕ್ಷತೆಗಾಗಿ ದೂರದೃಷ್ಟಿಯ ಯೋಜನೆಗಳ ಮೂಲಕ ಶೋಷಿತ ಸಮುದಾಯಗಳ ಆಶಾಕಿರಣವಾಗಿ ಬದ್ದತೆಯಿಂದ ಕಾರ್ಯನಿರ್ವಹಿಸುತ್ತಿರುವ ನಮ್ಮೆಲ್ಲರ ನೆಚ್ಚಿನ ಸಮಾಜ ಕಲ್ಯಾಣ ಸಚಿವರಾದ ಡಾ॥ ಹೆಚ್.ಸಿ. ಮಹದೇವಪ್ಪರವರು ತಡವಾಗಿ ಆಗಮಿಸಲಿದ್ದಾರೆ ಅವರಿಗೂ ಬ್ಯಾಂಕಿನ ಪರವಾಗಿ ಹಾಗೂ ವೈಯಕ್ತಿಕವಾಗಿ ಗೌರವಪೂರ್ವಕವಾಗಿ ಸ್ವಾಗತ ಕೋರುತ್ತೇನೆ.

ಸಮಾಜದಲ್ಲಿ ದುರ್ಬಲ ವರ್ಗಗಳ ಸಬಲೀಕರಣದ ಕಾರ್ಯದಲ್ಲಿ ನೂತನ ಯೋಜನೆಗಳನ್ನು ಅನುಷ್ಠಾನಗೊಳಿಸಿ ಅವರ ಬದುಕನ್ನು ಹಸನುಗೊಳಿಸಿದಾಗ ಜನಮಾಸದಲ್ಲಿ ಗೌರವ ಭಾವ ಮೂಡಿಸುತ್ತದೆ. ಕರ್ನಾಟಕ ರಾಜ್ಯದ ರಾಜಕಾರಣದಲ್ಲಿ ಭರವಸೆಯ ಮುತ್ಸದ್ದಿಯಾಗಿ ರಾಜ್ಯದ ಜನತೆಗೆ ಆತ್ಮಗೌರವ ತರುವ ತನ್ಮೂಲಕ ಗ್ರಾಮೀಣ ಅಬಿವೃದ್ದಿಗೆ ಶ್ರಮಿಸುತ್ತಿರುವ ಮಾನ್ಯ ಪಂಚಾಯತ್ ರಾಜ್ ಮತ್ತು ಗ್ರಾಮಿಣ ಅಬಿವೃದ್ದೀ ಸಚಿವರು ಯುವ ನೇತಾರರಾದ ಶ್ರೀಯುತ ಪ್ರಿಯಾಂಕ್ ಖರ್ಗೆ ರವರು ತಡವಾಗಿ ಆಗಮಿಸಲಿದ್ದಾರೆ ಅವರಿಗೂ ಬ್ಯಾಂಕಿನ ಪರವಾಗಿ ಹಾಗೂ ವೈಯಕ್ತಿಕವಾಗಿ ಗೌರವಪೂರ್ವಕವಾಗಿ ಸ್ವಾಗತ ಕೋರುತ್ತೇನೆ.

ಸ್ವತ: ಸಾಹಿತಿಗಳು, ಕವಿಗಳು, ಕಾರ್ಮಿಕ ನಾಯಕರು, ಸುಪ್ರಸಿದ್ದ ವಾಗ್ಮಿಗಳು, ರಾಜ್ಯದ ಅಲ್ಲದೆ ದೇಶದ ರಾಜಕೀಯ ವಿಚಾರಗಳಿಗೆ ವೈಚಾರಿಕ ನೆಲೆಗಟ್ಟಿನಲ್ಲಿ ಅರ್ಥಪೂರ್ಣ ಚರ್ಚೆಗಳ ಮೂಲಕ ಸ್ಪಷ್ಟರೂಪ ನೀಡುತ್ತಿರುವ ಭಾರತ ಸಂಸತ್ತಿನಲ್ಲಿ ರಾಜ್ಯದ ಪರ ಸರ್ಮರ್ಥನಿಯವಾಗಿ ಕಾರ್ಯನಿರ್ವಾಹಿಸುತ್ತಿರುವ ಸರಳ ಸಜ್ಜನಿಕೆ ಸ್ನೇಹ ಭಾವದ ಗುಣಗಳ ಮೂಲಕ ಯುವಕರಿಗೆ ಸದಾ ಸ್ಪೂರ್ತಿಯ ವ್ಯಕ್ತಿಯಾಗಿರುವ

ನಮ್ಮೆಲ್ಲರ ಹೆಮ್ಮೆಯ ಮಾನ್ಯ ರಾಜ್ಯಸಭಾಸದಸ್ಯರಾದ ಡಾ॥ ಎಲ್. ಹನುಮಂತಯ್ಯರವರಿಗೂ ಬ್ಯಾಂಕಿನ ಪರವಾಗಿ ಹಾಗೂ ವೈಯಕ್ತಿಕವಾಗಿ ಆಧಾರದ ಸ್ವಾಗತ ಕೋರುತ್ತೇನೆ.

ತೀಕ್ಷಣವಾದ ವಿಚಾರ ಮಂಡಣೆ ಮಂಡಿಸುವ ಹಾಗು ಬಿ.ಜೆ.ಪಿ. ವಕ್ತಾರರು ಮಾನ್ಯ ವಿಧಾನಪರಿಷತ್ ಸದಸ್ಯರಾದ ಶ್ರೀಯುತ:ಛಲವಾದಿ ನಾರಾಯಣಸ್ವಾಮಿರವರಿಗೂ ಬ್ಯಾಂಕಿನ ಪರವಾಗಿ ಹಾಗೂ ವೈಯಕ್ತಿಕವಾಗಿ ಸ್ವಾಗತ ಕೋರುತ್ತೇನೆ.

ಕನ್ನಡ ಭಾಷೆ, ಸಂಸ್ಕೃತಿ ಕಲೆ, ಚಿತ್ರರಂಗ ಯೆಂದರೆ ತಟ್ಟನೆ ನೆನಪಾಗುವ ಹೆಸರು ಶ್ರೀಯುತ ಕೆ. ಶಿವರಾಮುರವರು ಕನ್ನಡದಲ್ಲಿ ಭಾರತೀಯ ಆಡಳಿತ ಸೇವೆ ಪರೀಕ್ಷೆಯನ್ನು ಬರೆದು ಯಶಸ್ವಿಗೊಳಿಸಿ ಕನ್ನಡದ ಮೂಲಕವೂ ಉನ್ನತ ವಾದದನ್ನು ಸಾದಿಸಬಹುದೆಂದು ಕನ್ನಡದ ಗ್ರಾಮೀಣ ವಿದ್ಯಾರ್ಥಿಗಳಿಗೆ ಆತ್ಮವಿಶ್ವಾಸ ತುಂಬಿರುವ ಹಾಗೂ ತಾನು ಕಾರ್ಯನಿರ್ವಹಿಸಿದ ಎಲ್ಲಾ ಇಲಾಖೆಗಳಲ್ಲೂ ತನ್ನದೇ ವಿಶಿಷ್ಟ ಛಾವು ಮೂಡಿಸಿರುವ ದಕ್ಷಾಧಿಕಾರಿ ಹಾಗೂ ಛಲವಾದಿ ಮಹಸಭಾದ ಸಂಸ್ಥಾಪಕರು ಹಾಗು ರಾಜ್ಯಾಧ್ಯಕ್ಷರಾದ ಗೌರವಾನ್ವಿತ ಶ್ರೀ ಕೆ. ಶಿವರಾಮುರವರು ತಡವಾಗಿ ಆಗಮಿಸಲಿದ್ದಾರೆ ಅವರಿಗೂ ಬ್ಯಾಂಕಿನ ಪರವಾಗಿ ಹಾಗೂ ನನ್ನ ವೈಯಕ್ತಿಕವಾಗಿ ಹೃದಯಪೂರ್ವಕ ಸ್ವಾಗತ ಕೋರುತ್ತೇನೆ.

ಅದೇ ರೀತಿ ಮತ್ತೊಬ್ಬರು ಐ.ಎ.ಎಸ್. ಅದಿಕಾರಿ ಸಹಕಾರ ಸಂಘಗಳ ನಿಬಂಧಕರಾದ ಶ್ರೀಯುತ ಕ್ಯಾಪ್ಟನ್ ರಾಜೇಂದ್ರರವರಿಗೂ ಬ್ಯಾಂಕಿನ ಪರವಾಗಿ ಹಾಗೂ ನನ್ನ ವೈಯಕ್ತಿಕವಾಗಿ ಸ್ವಾಗತ ಕೋರುತ್ತೇನೆ.

1979 ರಲ್ಲಿ ಬ್ಯಾಂಕನ್ನು ಸ್ಥಾಪಿಸಿದ ಸಂಸ್ಥಾಪಕರುಗಳಿಗೆ ಹಾಗೂ ಸ್ಮರಣೀಯ ಕಟ್ಟಡ ಉದ್ಘಾಟನೆ ಸಮಾರಂಭದಲ್ಲಿ ಎಲ್ಲಾ ರೀತಿಯ ಸಹಕಾರ ನೀಡಿದ ನನ್ನ ಆಡಳಿತ ಮಂಡಲಿಯ ಸದಸ್ಯರುಗಳಿಗೆ, ಮಾಜಿ ಅಧ್ಯಕ್ಷರು, ಮಾಜಿ ಉಪಾಧ್ಯಕ್ಷರು, ಮಾಜಿ ನಿರ್ದೇಶಕರುಗಳಿಗೆ ಹಾಗೂ ಗೌರವಾನ್ವಿತ ಮಾನ್ಯ ಸದಸ್ಯರ ಬಂದುಗಳಿಗೆ, ಮಾಧ್ಯಮ ಮಿತ್ರರಿಗೆ ಸಾರ್ವಜನಿಕರಿಗೆ ತುಂಬು ಹೃದಯದ ಸ್ವಾಗತ ಕೋರುತ್ತೇನೆ.

ನಮ್ಮ ಬ್ಯಾಂಕ್ ಕಳೆದ 44 ವರ್ಷಗಳಿಂದ ಸದಸ್ಯರಿಗೆ ಗ್ರಾಹಕರಿಗೆ ನಿಸ್ವಾರ್ಥ ಸೇವೆಯನ್ನು ನೀಡುವಲ್ಲಿ ಸರ್ವದಿಸೆಯಲ್ಲಿ ಅತ್ಯುತ್ತಮವಾಗಿ ಮುನ್ನಡೆದಿದೆ ಎಂದು ಹೇಳಲು ತುಂಬ ಹೆಮ್ಮೆ ಎನಿಸುತ್ತದೆ.

ಪ್ರಸ್ತುತ ಹಣಕಾಸು ವರ್ಷದಲ್ಲಿ ಬ್ಯಾಂಕಿನ ಸದಸ್ಯರ ಸಂಖ್ಯೆ 8405 ಇದ್ದು ಷೇರು ಬಂಡಾವಳ 3.05 ಕೋಟಿ ಇರುತ್ತದೆ.

2022–23ನೇ ಸಾಲಿನಲ್ಲಿ ಕಾಯ್ದಿಟ್ಟ ನಿಧಿ ಮತ್ತು ಇತರೆ ನಿಧಿ ಒಟ್ಟು ರೂ. 8.11 ಕೋಟಿ ಈ ದೊಡ್ಡ ಪ್ರಮಾಣ ನಿಧಿಯು ಸಂಗ್ರಹಣೆಯಾಗಿದ್ದು ಎಂಥಹ ತುರ್ತು ಪರಿಸ್ಥಿತಿ ಬಂದರು ನಿಭಾಯಿಸುವ ಸಾಮರ್ಥ್ಯ ಹೊಂದಿದೆ ಹಾಗೂ ಪ್ರಸ್ತುತ ಸಾಲಿನ ಠೇವಣಿ ಹಣ 89.33 ಕೋಟಿ ಇದ್ದು ಗ್ರಾಹಕರ ಠೇವಣಿಗಳ ಭದ್ರತೆಗೆ ವಿಮೆ ಯೋಜನೆಯನ್ನು ಮಾಡಿ ಠೇವಣಿದಾರರಿಗೆ ಸಂಪೂರ್ಣ ರಕ್ಷಣೆ ಒದಗಿಸಲಾಗಿದೆ.

2022–23ನೇ ಸಾಲಿನಲ್ಲಿ ವಹಿವಾಟು ರೂ. 1398.74 ಕೋಟಿ ದಾಟಿರುತ್ತದೆ. 2022–23ನೇ ಸಾಲಿಗೆ ದುಡಿಯುವ ಬಂಡಾವಳ ರೂ. 103.17 ಕೋಟಿ ಇದ್ದು ಕಳೆದ ವರ್ಷಕ್ಕಿಂತ 8.97 ಲಕ್ಷ ಅದಿಕವಾಗಿರುತ್ತದೆ ಎಂದು ಈ ಮೂಲಕ ತಮಗೆ ತಿಳಿಸಲು ಬಯಸುತ್ತೇನೆ.

ಪ್ರಸ್ತುತ ಸಾಲಿನಲ್ಲಿ ಎನ್.ಪಿ.ಎ. ಪ್ರಮಾಣವು ಬೆಂಗಳೂರು ನಗರದ ಪ್ರತಿಷ್ಠಿತ ಬ್ಯಾಂಕುಗಳಲ್ಲಿ ಮೂರನೇ ಸ್ಥಾನದಲ್ಲಿದ್ದು ನಿವ್ವಳ ಎನ್.ಪಿ.ಎ. 0% ಇರುತ್ತದೆ ಎಂದು ಹೆಮ್ಮೆಯಿಂದ ಹೇಳಲು ಬಯಸುತ್ತೇನೆ.

ಪ್ರಸ್ತುತ ಸಾಲಿನಲ್ಲಿ ಬ್ಯಾಂಕು ರೂ. 83.00 ಲಕ್ಷ ನಿವ್ವಳ ಲಾಭಗಳಿಸಿದ್ದು ಬ್ಯಾಂಕಿನ ಆಡಿಟ್ ವರ್ಗಿಕರಣದಲ್ಲಿ 'ಎ' ದರ್ಜೆಯಲ್ಲಿ ಇರುತ್ತದೆ ಎಂದು ಬ್ಯಾಂಕಿನ ಎಲ್ಲಾ ಪ್ರಗತಿಯ ಬಗ್ಗೆ ತಿಳಿಸಲು ಹರ್ಷಿಸುತ್ತಾ ..

ಕೊನೆಯದಾಗಿ ಒಂದು ಡಿ.ವಿ.ಜಿಯವರ ಮಂಕುತಿಮ್ಮನ ಕಗ್ಗದ ಸಾಲುಗಳನ್ನು ಉಲ್ಲೇಖಿಸಿ ನನ್ನ ಸ್ವಾಗತ ಭಾಷಣವನ್ನು ಮುಗಿಸುತ್ತೇನೆ.

"ಇರುವ ಕೆಲಸವ ಮಾಡು ಕಿರಿದೆನದೆ ಮನವಿಟ್ಟು ದೊರೆತದು ಹಸಾದವೆಂದುಣ್ಣು ಗೊಣಗಿಡದೆ ಧರಿಸು ಲೋಕದ ಭರವ ಪರಮಾರ್ಥವನ್ನು ಬಿಡದೆ ಹೊರಡು ಕರೆ ಬರಲ್ ಆಳದೆ ಮಂಕುತಿಮ್ಮ"

ಜೈ ಹಿಂದ    ಜೈ ಬೀಮ್    ಜೈ ಕರ್ನಾಟಕ

**4. 2022–23ನೇ ಸಾಲಿನ 42ನೇ ವಾರ್ಷಿಕ ಸಾಮಾನ್ಯ ಸಭೆಯ ಸೂಚನಾ ಪತ್ರವನ್ನು ಓದಿ ದಾಖಲು ಮಾಡುವುದು.**

ಬ್ಯಾಂಕಿನ ನಿರ್ದೇಶಕರಾದ ಶ್ರೀ ಸಿ. ಸಿದ್ದರಾಜು ರವರು ಬ್ಯಾಂಕಿನ 2022–23 ನೇ ಸಾಲಿನ 42ನೇ ವಾರ್ಷಿಕ ಸಾಮಾನ್ಯ ಸಭೆಯ ಸೂಚನಾ ಪತ್ರವನ್ನು ಸಭೆಗೆ ಓದಿ ಹೇಳಿದರು. ಸಭೆಯು ಕರತಾಡನದ ಮೂಲಕ ಸರ್ವಾನುಮತದಿಂದ ಅಂಗೀಕರಿಸಿತು.

**5. ದಿನಾಂಕ: 18/09/2022 ರಂದು ನಡೆದ 2021–2022ನೇ ಸಾಲಿನ ವಾರ್ಷಿಕ ಮಹಾಸಭೆಯ ನಡವಳಿಗಳನ್ನು ಓದಿ ದೃಡೀಕರಿಸುವುದು.**

ದಿನಾಂಕ: 18/09/2022 ರಂದು ನಡೆದ ವಾರ್ಷಿಕ ಸರ್ವಸದಸ್ಯರ ಮಹಾಸಭೆಯ ನಡವಳಿಗಳನ್ನು ಬ್ಯಾಂಕಿನ ನಿರ್ದೇಶಕರಾದ ಶ್ರೀ ಎಂ.ಸಿ. ನಂದಕುಮಾರ್ ರವರು ಸಭೆಯಲ್ಲಿ ಓದಿ ಹೇಳಿದರು. ನಂತರ ಸಭೆಯಲ್ಲಿ ದಿನಾಂಕ: 18/09/2022 ರಂದು ನಡೆದ 2021–22 ನೇ ಸಾಲಿನ ವಾರ್ಷಿಕ ಮಹಾಸಭೆಯ ಎಲ್ಲಾ ದಾಖಲಾಗಿರುವ ನಡವಳಿಗಳನ್ನು ಮತ್ತು ವಿವರಣೆಯನ್ನು ಸಭೆಯು ಒಪ್ಪಿ ಸರ್ವಾನುಮತದಿಂದ ಅಂಗೀಕರಿಸಿತು.

**6. 2022–2023ನೇ ಸಾಲಿನ ಆಡಳಿತ ವರದಿಯನ್ನು ಪರಿಶೀಲಿಸಿ ಅಂಗೀಕರಿಸುವುದು.**

2022–2023ನೇ ಸಾಲಿನ ವಾರ್ಷಿಕ ವರದಿಯನ್ನು ಬ್ಯಾಂಕಿನ ಲೆಕ್ಕಿಗರಾದ ಶ್ರೀ. ಎನ್. ಎಂ.ಮಾದೇಶ್ ರವರು ಸಭೆಯಲ್ಲಿ ಪುಟ ಸಂಖ್ಯೆ 29 ರಿಂದ 57 ರ ವರೆಗೆ ಇರುವ ಮಾಹಿತಿಯನ್ನು ಓದಿ ವಿವರಿಸಿದರು. ಬ್ಯಾಂಕಿನಲ್ಲಿ 2022–2023ನೇ ಸಾಲಿನಲ್ಲಿ ಇದ್ದ ಸದಸ್ಯತ್ವ ಮತ್ತು ಷೇರು ಬಂಡವಾಳದ ಬಗ್ಗೆ ಆಪದ್ಧನ ಮತ್ತು ಇತರೇ ನಿಧಿಗಳು ಠೇವಣಿಗಳು, ಸಾಲ ಮತ್ತು ಮುಂಗಡಗಳು, ವಸೂಲಾತಿ, ಕರಡು ಮತ್ತು ಸಂಶಯಾಸ್ಪದ ಸಾಲದ ನಿಧಿ ಬಗ್ಗೆ ಮತ್ತು ವರದಿ ಸಾಲಿನಲ್ಲಿ ನಡೆದ ಸಭೆಗಳು, ಬ್ಯಾಂಕಿನ ಶಾಖೆಗಳ ಸ್ಥಿರಾಸ್ತಿಗಳ ಬಗ್ಗೆ ಲಾಭ ನಷ್ಟ ತಖ್ತೆ: ಮತ್ತು ಆಸ್ತಿ ಜವಾಬ್ದಾರಿ ತಖ್ತೆ:ಗಳನ್ನು ವಿವರಣೆ ನೀಡಿ ಅನುಮೋಧನೆಗೆ ಮಂಡಿಸಿದರು. ಸಭೆಯು

2022–2023ನೇ ಸಾಲಿನ ಆಡಳಿತ ವರದಿಯನ್ನು ಎಲ್ಲಾ ಸದಸ್ಯರ ಒಪ್ಪಿಗೆಮೇರೆಗೆ ಸರ್ವಾನುಮತದಿಂದ ಅಂಗೀಕರಿಸಲಾಯಿತು.

**7. 2022–23ನೇ ಸಾಲಿನ ಪರಿಶೋಧಿಸಲ್ಪಟ್ಟ ಲೆಕ್ಕ ಪತ್ರಗಳನ್ನು ಪರಿಶೀಲಿಸಿ ಅಂಗೀಕರಿಸುವುದು ಹಾಗೂ ಲೆಕ್ಕಪರಿಶೋಧಕರ ವರದಿಗೆ ಆಡಳಿತ ಮಂಡಳಿಯವರು ಕೊಟ್ಟಿರುವ ಸಮಜಾಯಿಷಿಗಳನ್ನು ಅಂಗೀಕರಿಸುವುದು.**

2022–23ನೇ ಸಾಲಿಗೆ ಲೆಕ್ಕಪತ್ರಗಳನ್ನು ಪರಿಶೋಧಿಸಿದ ಮೇ॥ ಎಂ.ಎನ್ ಎಸ್ ಅಂಡ್ ಕೋ ರವರು ನೀಡಿರುವ ಲೆಕ್ಕಪತ್ರಗಳ ವರದಿಯನ್ನು ಬ್ಯಾಂಕಿನ ನಿರ್ದೇಶಕರಾದ ಶ್ರೀಮತಿ ಅನಿತಾ, ಓದಿ ವರದಿಯಲ್ಲಿ ತಿಳಿಸಿರುವ ನ್ಯೂನತೆಗಳಿಗೆ ಬ್ಯಾಂಕಿನ ವತಿಯಿಂದ ನೀಡಿರುವ ಸಮಜಾಯಿಷಿಗಳನ್ನು ಸಹ ಸಭೆಗೆ ಓದಿ ತಿಳಿಸಿದರು. ಚರ್ಚೆ ನಂತರ 2022–23ನೇ ಸಾಲಿನ ಪರಿಶೋಧಿಸಲ್ಪಟ್ಟ ಲೆಕ್ಕ ಪತ್ರಗಳನ್ನು ಮತ್ತು ಲೆಕ್ಕಪರಿಶೋಧಕರ ವರದಿಗೆ ನೀಡಿರುವ ಸಮಜಾಯಿಷಿಗಳನ್ನು ಅಂಗೀಕರಿಸಿರುವುದಾಗಿ ಸರ್ವಾನುಮತದಿಂದ ತೀರ್ಮಾನಿಸಲಾಯಿತು.

**8. 2022–23ನೇ ಸಾಲಿನ ಲಾಭದ ವಿಂಗಡಣೆ ಹಾಗೂ ವಿತರಣೆಯನ್ನು ಅಂಗೀಕರಿಸುವುದು.**

ಉಪನಿಯಮದ 96 ಹಾಗೂ ಸಹಕಾರ ಸಂಘಗಳ ಕಾಯ್ದೆ ಕಲಂ 57ರನ್ವಯ ಈ ಕೆಳಕಂಡಂತೆ ಲಾಭ ವಿಂಗಡಣೆ ಮಾಡಿರುವುದನ್ನು ಬ್ಯಾಂಕಿನ ನಿರ್ದೇಶಕರಾದ ಶ್ರೀ. ಅರುಂಧತಿ ನವರು ಸಭೆಗೆ ಓದಿ ಹೇಳುತ್ತಾ ಪ್ರಸಕ್ತ ಸಾಲಿನಲ್ಲಿ ಬ್ಯಾಂಕು ರೂ.113.19 ಲಕ್ಷಗಳ ಲಾಭಗಳಿಸಿದ್ದು ಈ ಲಾಭದಲ್ಲಿ ಲೆಕ್ಕಪರಿಶೋಧನಾ ಶುಲ್ಕ ರೂ. 1.86 ಲಕ್ಷ, ಆದಾಯ ತೆರಿಗೆ ರೂ.28.00 ಲಕ್ಷಗಳನ್ನು ಕಾದಿರಿಸಿದ ನಂತರ ನಿವ್ವಳ ಲಾಭ ರೂ.83.33ಲಕ್ಷಗಳ ಲಾಭ ಬಂದಿರುತ್ತದೆ ಎಂದು ತಿಳಿಸಿದರು.

ಭಾರತೀಯ ರಿಸರ್ವ ಬ್ಯಾಂಕಿನ ನಿರ್ದೇಶನದಂತೆ ಈ ವರ್ಷ ಡಿವಿಡೆಂಟ್ 9% ನೀಡಲಾಗುವುದು.

ಪ್ರಸಕ್ತ ಲಾಭ ರೂ.83,33,264.65 ಗಳನ್ನು ಬ್ಯಾಂಕಿನ ಉಪನಿಯಮ 103 ಹಾಗೂ ಸಹಕಾರ ಸಂಘಗಳ ಕಾಯ್ದೆ ಕಲಂ 57ರನ್ವಯ ಈ ಸಾಮಾನ್ಯ ಸಭೆಯಲ್ಲಿ ಮಂಡಿಸಲಾಗಿದೆ ಮತ್ತು ಈ ಕೆಳಕಂಡಂತೆ ಲಾಭ ವಿಂಗಡಣೆ ಮಾಡಲಾಗುವುದೆಂದು ಸಭೆಗೆ ತಿಳಿಸಿದರು.

## ಲಾಭ ವಿಂಗಡಣೆ

| ಕ್ರ. ಸಂ. | ವಿವರ | ಮೊಬಲಗು |
|---|---|---|
| 1 | ರಿಸರ್ವ್ ಫಂಡ್ (25%) | 2,083,316–00 |
| 2 | ಸಹಕಾರಿ ವಿದ್ಯಾನಿಧಿ(2%) | 124,999–00 |
| 3 | ಡಿವಿಡೆಂಡ್(9%) | 2,746,224–00 |
| 4 | ಕರಡು ಸಾಲದ ನಿಧಿ(10%) | 331,623–00 |
| 5 | ಕಟ್ಟಡ ನಿಧಿ (15%) | 497,434–00 |
| 6 | ದಾನ ನಿಧಿ (10%) | 331,623–00 |

| | | |
|---|---|---|
| 7 | ಪ್ರಚಾರ ನಿಧಿ (10%) | 331,623–00 |
| 8 | ಪಟ್ಟಣ ಸಹಕಾರಿ ಬ್ಯಾಂಕ್ ಅಭಿವೃದ್ಧಿ ನಿಧಿ (1%) | 62,500–00 |
| 9 | ಮರಣೋತ್ತರ ನಿಧಿ (10%) | 331,623–00 |
| 10 | ಲಾಭಾಂಶ ಸಮ ನಿಧಿ (10%) | 331,623–00 |
| 11 | ಜುಬಿಲಿ ಫಂಡ್ (10%) | 331,623–00 |
| 12 | ನಿರ್ದೇಶಕರ ಪರಿಹಾರ ನಿಧಿ (10%) | 331,623–00 |
| 13 | ಸಿಬ್ಬಂದಿ ಪರಿಹಾರ ನಿಧಿ (10%) | 331,623–00 |
| 14 | ಉಳಿಕೆ ಲಾಭ(ರಿಸರ್ವ್ ಫಂಡಿಗೆ) | 165807–65 |
| | **ಒಟ್ಟು ರೂ.** | **83,33,264.65** |

ಸಭೆಯು ಒಪ್ಪಿ ಮೇಲೆ ವಿವರಿಸಲಾದ ಲಾಭ ವಿಂಗಡಣೆಯನ್ನು ಸರ್ವಾನುಮತದಿಂದ ಅಂಗೀಕರಿಸಿತು.

**9. 2023–24ನೇ ಸಾಲಿಗೆ ಆಡಳಿತ ಮಂಡಲಿ ಮಂಡಿಸಿರುವ ಅಂದಾಜು ಆಯ–ವ್ಯಯಗಳನ್ನು ಅಂಗೀಕರಿಸುವುದು ಮತ್ತು 2022–23ನೇ ಸಾಲಿನ ಅಂದಾಜಿಗಿಂತ ಹೆಚ್ಚುವರಿಯಾಗಿರುವ ಖರ್ಚುಗಳನ್ನು ಅಂಗೀಕರಿಸುವುದು.**

ಬ್ಯಾಂಕಿನ ನಿರ್ದೇಶಕರಾದ ಶ್ರೀ. ಎಸ್.ನಂಜುಂಡಸ್ವಾಮಿ ರವರು 2022–23ನೇ ಸಾಲಿನ ಖರ್ಚುಗಳ ಬಗ್ಗೆ ವಿವರಣೆ ನೀಡಿ ಕೆಲವು ಮುಖ್ಯ ಖಾತೆಗಳಲ್ಲಿ (Head of A/cs) ಗಳಲ್ಲಿ ಅಂದಾಜು ವೆಚ್ಚಕ್ಕಿಂತ ಹೆಚ್ಚಿಗೆ ಖರ್ಚು ಮಾಡಿರುವುದರ ಬಗ್ಗೆ ಸೂಕ್ತ ವಿವರಣೆಯನ್ನು ನೀಡಿದರು. ಮುಂದುವರಿದು 2023–2024ನೇ ಸಾಲಿನ ಆಂದಾಜು ಆಯ–ವ್ಯಯಗಳ ವಿವರಣೆಯನ್ನು ಸಭೆಯ ಮುಂದೆ ಓದಿ ಹೇಳಿದರು. ಸಭೆಯು 2022–2023ನೇ ಸಾಲಿನ ಅಂದಾಜು ಆಯ–ವ್ಯಯಕ್ಕಿಂತ ಹೆಚ್ಚಾಗಿ ಖರ್ಚಾಗಿರುವ ಮತ್ತು 2023–2024ನೇ ಸಾಲಿನ ಅಂದಾಜು ಆಯ–ವ್ಯಯಗಳನ್ನು ಸರ್ವಾನುಮತದಿಂದ ಒಪ್ಪಿ ಅಂಗೀಕರಿಸಿತು.

**10. 2023–2024ನೇ ಸಾಲಿಗೆ ಲೆಕ್ಕಪರಿಶೋಧಕರನ್ನು ನೇಮಿಸುವುದು.**

2023–2024ನೇ ಸಾಲಿಗೆ ಸನ್ನದು ಲೆಕ್ಕಪರಿಶೋಧಕರನ್ನಾಗಿ ನೇಮಕ ಮಾಡುವ ಕುರಿತು ನಿರ್ದೇಶಕರಾದ ಶ್ರೀ.ಸಿ.ಮಹದೇವಯ್ಯರವರು ಭಾರತೀಯ ರಿಝರ್ವ್ ಬ್ಯಾಂಕಿನ ಸುತ್ತೋಲೆ:RBI/2021-22/25, Ref: No.Dos.CO.ARG/SEC.01/08.91.001/2021-22, Date:27.04.2021 ರಂತೆ ಬ್ಯಾಂಕಿನ ಶಾಸನ ಬದ್ಧ ಲೆಕ್ಕಪರಿಶೋಧಕರ ಮರು ನೇಮಕಾತಿ ಮಾಡಲು ಪಡೆದ ಈ ಕೆಳಕಂಡ M.N.S & CO, ರವರನ್ನು 3ನೇ ಭಾರಿಗೆ ಭಾರತೀಯ ರಿಝರ್ವ್ ಬ್ಯಾಂಕಿನ ನಿಯಮಾವಳಿಯಂತೆ M/S M.N.S & CO, ರವರನ್ನು 2023–24 ನೇ ಸಾಲಿನ ಶಾಸನ ಬದ್ಧ ಲೆಕ್ಕಪರಿಶೋಧಕರಾಗಿ ಮರು ನೇಮಕಾತಿ ಮಾಡಲು ತೀರ್ಮಾನಿಸಿರುವುದರಿಂದ ಸದರಿ ನೇಮಕಾತಿಗೆ ಸಭೆಯು ಅನುಮೋಧನೆ ನೀಡಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತಿದ್ದೇನೆ ಎಂದು ಹೇಳಿದರು. ನಂತರ ಸಭೆಯು ಮೇಲ್ಕಂಡ ನೇಮಕಾತಿಗೆ ಅನುಮೋದನೆ ನೀಡಿತು.

**11. ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡುವ ಬಗ್ಗೆ**

ಪ್ರತಿ ವರ್ಷದಂತೆ ಈ ಸಾಲಿನಲ್ಲೂ ಸಹ ಎಸ್.ಎಸ್.ಎಲ್.ಸಿ. ಯಲ್ಲಿ 6 ವಿದ್ಯಾರ್ಥಿಗಳಿಗೆ, ಪಿ,ಯು.ಸಿ 5 ವಿದ್ಯಾರ್ಥಿಗಳಿಗೆ, ಪದವಿ 4 ವಿದ್ಯಾರ್ಥಿಗಳಿಗೆ, ಇಂಜಿನಿಯರಿಂಗ್ ಪದವಿ 4 ವಿದ್ಯಾರ್ಥಿಗಳಿಗೆ ಮತ್ತು ಸ್ನಾತಕೋತ್ತರ ಪದವಿ ಪಡೆದ 4 ವಿದ್ಯಾರ್ಥಿಗಳಿಗೆ ಮತ್ತು ಪಿ.ಹೆಚ್.ಡಿ. ಪಡೆದ 1 ವಿದ್ಯಾರ್ಥಿಗೆ ಪ್ರೋತ್ಸಾಹ ಹಣ ಮತ್ತು ಪ್ರಶಸ್ತಿ ಪತ್ರಗಳನ್ನು ನೀಡಿ ಪುರಸ್ಕರಿಸಲಾಯಿತು.

**2022–23 ಸಾಲಿನ ಎಸ್.ಎಸ್.ಎಲ್.ಸಿ. ಯಲ್ಲಿ ಹೆಚ್ಚು ಅಂಕಗಳು ಪಡೆದ ವಿದ್ಯಾರ್ಥಿಗಳ ಪಟ್ಟಿ**

| ಕ್ರ. ಸಂ. | ವಿದ್ಯಾರ್ಥಿ/ನಿಯ ಹೆಸರು | ಸ. ಸಂಖ್ಯೆ | ಸದಸ್ಯರ ಹೆಸರು | ಶೇಕಡವಾರು ಗಳಿಸಿದ ಅಂಕ |
|---|---|---|---|---|
| 1 | ಅಕ್ಷಯ ಗುರುಸ್ವಾಮಿ | R-8197 | ಟಿ. ಆರ್. ಗುರುಸ್ವಾಮಿ | 96.20% |
| 2 | ಮನಿಷ ರಾಜ್ ಕೆ. | R- 10539 | ಕೆಂಪರಾಜು ಎಲ್. | 94.88% |
| 3 | ಡಿ. ರಿಷಿ ಅನುಪಮ | R- 9586 | ಎಸ್. ಆರ್. ಅರುಣಾಕ್ಷಿ | 93.44% |
| 4 | ಶೋಭಾ ಎಂ.ಕೆ. | R- 10724 | ಕೆಂಪರಾಜು ಎಂ.ಕೆ. | 93.28% |
| 5 | ಸೃಜನ ಬಿ.ಎನ್. ರವಲೆ | R- 9398 | ನಂಜುಂಡ ಸ್ವಾಮಿ ಬಿ.ಆರ್. | 91.52% |
| 6 | ಚಿನ್ಮಯಿ ಹೆಚ.ವೈ. | R- 10538 | ಯೋಗೇಶ್ ಹೆಚ್.ಸಿ. | 80% |

**2022–23 ಸಾಲಿನ ಪಿ.ಯು.ಸಿ. ಯಲ್ಲಿ ಹೆಚ್ಚು ಅಂಕಗಳನ್ನು ಪಡೆದ ವಿದ್ಯಾರ್ಥಿಗಳ ಪಟ್ಟಿ**

| ಕ್ರ. ಸಂ. | ವಿದ್ಯಾರ್ಥಿ/ನಿಯ ಹೆಸರು | ಸ. ಸಂಖ್ಯೆ | ಸದಸ್ಯರ ಹೆಸರು | ಶೇಕಡವಾರು ಗಳಿಸಿದ ಅಂಕ |
|---|---|---|---|---|
| 1 | ರಿಷಿತಾ ಕೆ ಎಸ್ | R- 9410 | ಎಂ ಶಿವಯ್ಯ | 97.33% |
| 2 | ವಿಕಾಸ್ ಎಂ | R- 9867 | ಮಹದೇವ ಆರ್ | 94.50% |
| 3 | ನಿಖಿಲ್ ಎಂ | R- 10390 | ಮೂರ್ತಿ ಕೆ & ಪದ್ಮಾವತಿ | 88% |
| 4 | ಚಂದನ ಎಸ್ ಎಂ | R- 3581 | ಎಚ್ ಎಲ್ ಮಹದೇವ್ | 86.67% |
| 5 | ನಿಸರ್ಗ ಆರ್ | R- 10965 | ರೂಪ | 85.16% |

## 2022–23 ಸಾಲಿನ ಪದವಿಯಲ್ಲಿ ಹೆಚ್ಚು ಅಂಕಗಳನ್ನು ಪಡೆದ ವಿದ್ಯಾರ್ಥಿಗಳ ಪಟ್ಟಿ

| ಕ್ರ. ಸಂ. | ವಿದ್ಯಾರ್ಥಿ/ನಿಯ ಹೆಸರು | ಸ. ಸಂಖ್ಯೆ | ಸದಸ್ಯರ ಹೆಸರು | ತೇರ್ಗಡೆಯಾದ ಪರೀಕ್ಷೆ | ಶೇಕಡವಾರು ಗಳಿಸಿದ ಅಂಕ |
|---|---|---|---|---|---|
| 1 | ಪಿ. ಅನುಪಮ | R- 4612 | ಪುಟ್ಟಮಲ್ಲಯ್ಯ ಸಿ | ಬಿ.ಕಾಂ | 90% |
| 2 | ಬಿ.ಆರ್. ಭರತ್ | R- 5470 | ಬಿ.ಕೆ. ರುದ್ರೇಶ್ | ಬಿ.ಸಿ.ಎ. | 88.78% |
| 3 | ತೇಜ್ ಪವನ್ ಎನ್. | R- 4323 | ನಾಗೇಶ್ ಎಸ್. | ಬಿ.ಎಡ್. | 84.64% |
| 4 | ಶ್ರೀನಿವಾಸ್ ಕೆ. | R- 5978 | ಕೆಂಪರಾಜು ಕೆ. | ಬಿ.ಎಸ್.ಸಿ. | 72% |

## 2022–23ಸಾಲಿನ ಇಂಜಿನಿಯರಿಂಗ್ ಪದವಿಯಲ್ಲಿ ಹೆಚ್ಚು ಅಂಕಗಳನ್ನು ಪಡೆದ ವಿದ್ಯಾರ್ಥಿಗಳ ಪಟ್ಟಿ

| ಕ್ರ. ಸಂ. | ವಿದ್ಯಾರ್ಥಿ/ನಿಯ ಹೆಸರು | ಸ. ಸಂಖ್ಯೆ | ಸದಸ್ಯರ ಹೆಸರು | ತೇರ್ಗಡೆಯಾದ ಪರೀಕ್ಷೆ | ಶೇಕಡವಾರು ಗಳಿಸಿದ ಅಂಕ |
|---|---|---|---|---|---|
| 1 | ಚಂದನಾ ಎ.ಜಿ. | R- 6488 | ಗಂಗರಾಜು | ಬಿ.ಇ. | 7.85% |
| 2 | ರೇವಂತ್ ಕೆ. | A-2677 | ಕಮಲಾಕರ್ ಹೆಚ್ | ಬಿ.ಇ | 7.61% |
| 3 | ಕೆ. ಶಂಶಾಕ್ ಕುಮಾರ್ | R- 5519 | ಡಿ. ಕೋದಂಡ ರಾಮ | ಬಿ.ಇ. | 7.74% |
| 4 | ಕೆ. ಹರ್ಷಿತ | R- 5845 | ಡಿ. ಕೇಶವಮೂರ್ತಿ | ಬಿ.ಇ. | 7.2% |

## 2022–23 ಸಾಲಿನ ಸ್ನಾತಕೋತ್ತರ ಪದವಿಯಲ್ಲಿ ಹೆಚ್ಚು ಅಂಕಗಳನ್ನು ಪಡೆದ ವಿದ್ಯಾರ್ಥಿಗಳ ಪಟ್ಟಿ

| ಕ್ರ. ಸಂ. | ವಿದ್ಯಾರ್ಥಿ/ನಿಯ ಹೆಸರು | ಸ. ಸಂಖ್ಯೆ | ಸದಸ್ಯರ ಹೆಸರು | ತೇರ್ಗಡೆಯಾದ ಪರೀಕ್ಷೆ | ಶೇಕಡವಾರು ಗಳಿಸಿದ ಅಂಕ |
|---|---|---|---|---|---|
| 1 | ಅನುಷಾ ಬಿ.ಎಸ್. | R- 10392 | ಶಿವಕುಮಾರ್ | ಎಂ.ಎಸ್.ಸಿ. | 82.48% |
| 2 | ಡಾ. ಸುಕೃತ ಆರ್. | R- 10455 | ಎಂ.ಡಿ. ರಾಘವೇಂದ್ರ ಸ್ವಾಮಿ | ಎಂ.ಡಿ ಆರ್ಥೋಪಿಡಿಕ್ಸ್ | 73.66% |
| 3 | ಸುರಕ್ಷಾ ಎಸ್ ಎ. | R- 5092 | ಸಿದ್ದರಾಮಯ್ಯ ಎಂ. | ಎಂ.ಎಸ್.ಸಿ. | 72.70% |
| 4 | ಶ್ರೇಯಸ್ ಜಿ.ಎಸ್. | R- 10360 | ಸಿದ್ದರಾಜು ಎಂ.ಜಿ. | ಎಂ.ಟೆಕ್ | 7.22% |
| 5 | ಡಾ. ಲೋಕೇಶ ಕೆ.ಜಿ. | R- 9729 | ಲೋಕೇಶ ಕೆ.ಜಿ. | ಪಿ.ಹೆಚ್.ಡಿ. in Law | – |

**12. ಸದಸ್ಯರಿಂದ ಬಂದ ಸಲಹೆಗಳು ಮತ್ತು ವಿಷಯಗಳ ಪರಿಶೀಲನೆ.**

**13. ಅಧ್ಯಕ್ಷರ ಅಪ್ಪಣೆಯ ಮೇರೆಗೆ ಚರ್ಚಿಸಿದ ಇತರೆ ವಿಷಯಗಳು:**

**1 ವಿಷಯ:** ಚಂದ್ರಶೇಕರಯ್ಯ ರವರು (ಸ.ಸಂಖ್ಯೆ:4817) ಬ್ಯಾಂಕಿಗೆ ಒಂದು ಪತ್ರ ನೀಡಿ ಪತ್ರದಲ್ಲಿ ಈ ಕೆಳಕಂಡಂತೆ ಪ್ರಶ್ನೆಗಳನ್ನು ಕೇಳಿರುತ್ತಾರೆ.

1. 2020–21 ರಲ್ಲಿ ನಡೆದ ವಾರ್ಷಿಕ ಮಹಾ ಸಭೆಯನ್ನು ವರ್ಚುವಲ್ ಮೀಟಿಂಗ್ ಮುಖಾಂತರ ಹೆಡ್ ಆಫೀಸ್ ಬಿಲ್ಡಿಂಗ್ ನಲ್ಲಿ ನಡೆಸಿರುತ್ತೀರಿ. ಆದರೆ 2021–22 ನೇ ವಾರ್ಷಿಕ ಮಹಾಸಭೆಯನ್ನು ಅದೇ ವರ್ಚುವಲ್ ಮೀಟಿಂಗನ್ನು ಯಾವುದೇ ಸದಸ್ಯರನ್ನು ಕರೆಯದೇ ನೀವು ರೆಸಾರ್ಟ ನಲ್ಲಿ ವರ್ಚುವಲ್ ಮೀಟಿಂಗ್ ನಡೆಸುವ ಉದ್ದೇಶವೇನು ? ಕಾರಣ ತಿಳಿಸಿ

**ಉತ್ತರ:** ಅಧ್ಯಕ್ಷರು ಮಾತನಾಡಿ 2021–22 ನೇ ವಾರ್ಷಿಕ ಮಹಾಸಭೆಯನ್ನು ಬ್ಯಾಂಕಿನ ಸಲಹೆಗಾರರು ಅಧ್ಯಕ್ಷರಾಗಿರುವ ಕ್ಲಬ್ ನಲ್ಲಿ ಮಾಡಿದ್ದೇವೆ ಇದಕ್ಕೆ ಕಾರಣ 2020–21 ನೇ ಸಾಲಿನಲ್ಲಿ ವರ್ಚವಲ್ ಸಭೆ ನಡೆದಾಗ ನೆಟ್ ವರ್ಕ ಸಮಸ್ಯೆ ಇಂದ ಅನೇಕ ಸದಸ್ಯರು ಸಭೆಯಲ್ಲಿ ಭಾಗವಹಿಸಲು ಸಾದ್ಯವಾಗಲಿಲ್ಲ ಆ ಕಾರಣ 2021–22 ನೇ ಸಾಲಿನಲ್ಲಿ ಅದೇ ಸಮಸ್ಯೆ ಮರುಕಳಿಸಬಾರದು ಎಂಬ ನಿಟ್ಟಿನಲ್ಲಿ ಕ್ಲಬ್ ನಲ್ಲಿ ಸಭೆ ನಡೆಸಿದ್ದೇವೆ, ಹಾಗು ಕ್ಲಬ್ ನಲ್ಲಿ ವೈಫೈ ಸೌಲಭ್ಯ ಹಾಗು ಸಭೆಯಲ್ಲಿ ಮಾತನಾಡುವ ಸದಸ್ಯರಿಗೆ ಯಾವುದೇತೊಂದರೆ ಆಗದಂತೆ ಪ್ರತ್ಯೇಕ ಸ್ಥಳಾವಕಾಶ ನೀಡಿದ ಕಾರಣ ಸಭೆಯನ್ನು ಅಲ್ಲಿ ನಡೆಸಿದ್ದೇವೆ ಎಂದು ಉತ್ತರಿಸಿದರು.

2. ಶಿರಸಿಯಲ್ಲಿ ನಡೆದ ಡಿಪಾರ್ಟಮೆಂಟ್ ಮೀಟಿಂಗ್ ಭಾಗವಹಿಸಲು ಬ್ಯಾಂಕ್ ಕಾರು ತೆಗೆದುಕೊಂಡು ಹೋಗಿದ್ದ ನಿರ್ದೇಶಕರು ಕಾರವಾರ ಮತ್ತು ಗೋವಾದಲ್ಲಿ ಯಾವ ಮೀಟಿಂಗ್ ಅಟೆಂಡ್ ಮಾಡಲು ಹೋಗಿದ್ದರು ತಿಳಿಸಿ.

**ಉತ್ತರ:** ಅಧ್ಯಕ್ಷರು ಮಾತನಾಡಿ ಶಿರಸಿಯಲ್ಲಿ ದಿನಾಂಕ: 29/11/2022 ರಂದು ನಡೆದ ಆಡಳಿತ ಮಂಡಳಿ ಸಭೆಯ ಪೂರ್ಮಾನುಮತಿ ಮೇರೆಗೆ ದಿನಾಂಕ:10/12/2022 ರಂದು ಪಟ್ಟಣ ಸಹಕಾರ ಬ್ಯಾಂಕುಗಳ ಮಹಾಮಂಡಳ ಇವರು ಬ್ಯಾಂಕಿನ ಆಡಳಿತ ಮಂಡಳಿ ಸದಸ್ಯರಿಗೆ ಹಾಗು ಅದಿಕಾರಿ ವರ್ಗದವರಿಗೆ ಒಂದು ದಿನದ ವಿಚಾರಣಾ ಸಂಕೀರಣ ವನ್ನು ಎಂ.ಇ.ಎಸ್ ಕಾಲೇಜ್ ಆಫ ಕಾಮರ್ಸ, ಕಾಲೇಜ್ ರಸ್ತೆ, ಶಿರಸಿ, ಉತ್ತರ ಕನ್ನಡ ಇಲ್ಲಿ ನಡೆಸಿರುವುದರಿಂದ ಬ್ಯಾಂಕಿನ ಆಡಳಿತ ಮಂಡಳಿಯ 4 ಜನ ಆ ಸಭೆಗೆ ಹಾಜರಾಗಿದ್ದೇವೆ ಸಭೆಯಲ್ಲಿ ಬ್ಯಾಂಕಿನ ಇತ್ತೀಚಿನ ಬದಲಾವಣೆ ಹಾಗು ರೆಕಮಂಡೇಷನ್ ಕಮಿಟಿಯವರು ನೀಡಿದ ಸಲಹೆ ಸೂಚನೆಯು ಬ್ಯಾಂಕಿನ ಅಬಿವೃದ್ದಿಗೆ ಸಹಕಾರಿಯಾಗಿವೆ ಎಂದು ಹೇಳಿದರು ಅಲ್ಲದೆ ಮೇಲ್ಕಂಡ ಸಭೆಗೆ ಹಾಜರಾಗಿ ಸಭೆ ಬಳಿಕ ವಾಪಾಸಾಗುವ ಸಂದರ್ಭದಲ್ಲಿ ಮುರುಡೇಶ್ವರ ದೇವಸ್ಥಾನಕ್ಕೆ ಹೊಗಿದ್ದೆವು ಹಾಗು ಸದರಿ ಸಭೆಗೆ ಹಾಗಜರಾಗಲು 4 ಜನ ಸದಸ್ಯರಿಗೆ ಡೀಸಲ್, ರೂಮಿನ ಭಾಡಿಗೆ ಊಟದ ಖರ್ಚು ರೂ.24307.00 ವೆಚ್ಚವಾಗಿರುತ್ತದೆ ಅಲ್ಲದೆ ಗೋವಾ ಮತ್ತು ಕಾರವಾರ ಎಂಬುದು ತಪ್ಪು ಮಾಹಿತಿಯಾಗಿರುತ್ತದೆ ಎಂದು ತಿಳಿಸಿದರು.

3. ಸದಸ್ಯರು ಯಾವುದಾದರು ದಾಖಲೆಗಳನ್ನು ಕೇಳಿದರೆ ಕಾರ್ಯದರ್ಶಿಯವರು ಆರ್.ಬಿ.ಐ ರೂಲ್ಸ ಪ್ರಕಾರ ಬ್ಯಾಂಕಿನ ಯಾವುದೇ ದಾಖಲೆಗಳನ್ನು ಕೊಡುವುದಕ್ಕೆ ಬರುವುದಿಲ್ಲ ಎಂದು ತಿಳಿಸಿರುತ್ತಾರೆ. ಆದ್ದರಿಂದ ಆರ್.ಬಿ.ಐ ರೂಲ್ಸ ಏನು ಇದೆ ಎಂದು ಸಾಮಾನ್ಯ ಸಭೆಯಲ್ಲಿ ತಿಳಿಸಿ, ಮತ್ತು ಆರ್.ಬಿ.ಐ ರೂಲ್ಸ ಪ್ರತಿಯನ್ನು ಸಾಮಾನ್ಯ ಸಭೆಯಲ್ಲಿ ನೀಡಬೇಕೆಂದು ಕೇಳಿಕೊಳ್ಳುತ್ತೇನೆ.

**ಉತ್ತರ:** ಅಧ್ಯಕ್ಷರು ಮಾತನಾಡಿ RBI/2012-13/67, UBD. BPD. (PCB). MC.No.10/12.05.001/2012-13, dated: July 2, 2012 all urben co op bank, The Chief Executive Officers ರವರಿಗೆ ನೀಡಿದ ಸುತ್ತೋಲೆಯಂತೆ ಗ್ರಾಹಕರ ಮಾಹಿತಿಯನ್ನು ಗ್ರಾಹಕರಲ್ಲದವರಿಗೆ ನೀಡಬಾರದು ಎಂದು ಸುತ್ತೋಲೆ (ಮಾಸ್ಟರ್ ಡೈರೆಕ್ಷನ್) ನೀಡಿದ ಹಿನ್ನೆಲೆಯಲ್ಲಿ ಬ್ಯಾಂಕಿನ ಮಾಹಿತಿಯನ್ನು ಯಾವುದೇ ಪೂರ್ವಾನುಮತಿ ಇಲ್ಲದೆ ನೀಡಬಾರದು ಆದ್ದರಿಂದ ತಾವು ಕೇಳಿದ ಯಾವುದೇ ಮಾಹಿತಿಯನ್ನು ಆಡಳಿತ ಮಂಡಳಿ ಅಥವಾ ಸಕ್ಷಮ ಪ್ರಾಧಿಕಾರದ ಪೂರ್ವಾನುಮತಿ ಪಡೆಯುವುದು ನಿಯಮವಾಗಿದೆ ಎಂದು ಹೇಳಿದರು ನಂತರ ಅದರ ಪ್ರತಿಯನ್ನು ಶ್ರೀ. ಚಂದ್ರಶೇಖರಯ್ಯರವರಿಗೆ ನೀಡಿದರು.

4. ಕೆಲ ಸದಸ್ಯರು ಸಾಲ ತೀರಿಸಿದ ಮೇಲೆ ಆ ವ್ಯಕ್ತಿಗೆ ಯಾವ ನೋಟೀಸ್ ಕೂಡ ನೀಡದೇ ಸದಸ್ಯತ್ವ ವಜಾಗೊಳಿಸಿದ್ದೀರಾ ಇದು ಯಾವ ಕಾನೂನಿನಲ್ಲಿದೆ ಇದರ ಪ್ರತಿ ನೀಡಬೇಕಾಗಿ ಕೇಳಿಕೊಳ್ಳುತ್ತೇನೆ.

**ಉತ್ತರ:** ಬ್ಯಾಂಕಿನಲ್ಲಿ ಬೈಲಾ ನಿಯಮಾವಳಿಯಂತೆ ಕೆಲವು ಸದಸ್ಯರ ಷೇರು ಹಣ ಒಂದು ಸಾವಿರಕ್ಕಿಂತ ಕಡಿಮೆ ಇದ್ದಂತಹ ಸದಸ್ಯರಿಗೆ ಮೂರು ಬಾರಿ ಪತ್ರ ಬರೆದು 1000ಕ್ಕಿಂತ ಕಡಿಮೆ ಇರುವ ಸದಸ್ಯರು ತಮ್ಮ ಷೇರು ಹಣ ಕನಿಷ್ಟ 1000 ನಿರ್ವಹಿಸಲು ಹಾಗು ಬಾಕಿ ಹಣ ಪಾವತಿಗೆ ಕಾಲಾವಕಾಶ ನೀಡಿದ ನಂತರ ಯಾರು ಕನಿಷ್ಟ 1000 ಷೇರು ಹಣ ನಿರ್ವಹಿಸಲು ವಿಫಲರಾಗಿರುತ್ತಾರೋ ಅಂತಹ ಸದಸ್ಯರ ಸದಸ್ಯತ್ವವನ್ನು ವಜಾಗೊಳಿಸಿದ್ದೇವೆ.

**2. ವಿಷಯ:** ಸದಸ್ಯರಾದ ಶ್ರೀ.ಶಿವಲಿಂಗಸ್ವಾಮಿ ರವರು (ಸ.ಸಂಖ್ಯೆ:4551) ಬ್ಯಾಂಕಿಗೆ ಸರ್ವಸದಸ್ಯರ ಸಭೆ ಉದ್ದೇಶಿಸಿ ಮಾತನಾಡಲು ಪತ್ರ ನೀಡಿರುವುದರಿಂದ ಅವರಿಗೆ ಅವಕಾಶ ನೀಡಲಾಯಿತು. ಶ್ರೀ.ಶಿವಲಿಂಗಸ್ವಾಮಿ, ಶ್ರೀ.ಗುರುಸ್ವಾಮಿ, ಶ್ರೀ.ಸಿದ್ದಯ್ಯ, ಶ್ರೀ.ಡಿ.ಸಿದ್ದರಾಜು ಕು.ಹರ್ಷಿತಾ ಗಾಂದಿ, ಶ್ರೀ.ಪುಟ್ಟಸ್ವಾಮಿ ರವರುಗಳು ಸಭೆಯಲ್ಲಿ ಈ ಕೆಳಕಂಡಂತೆ ಪ್ರಶ್ನೆಯನ್ನು ಕೇಳಿ ಉತ್ತರ ಪಡೆದಿರುತ್ತಾರೆ.

1) ಪುಟ ಸಂಖ್ಯೆ 46 – ಜಾಹಿರಾತು ವೆಚ್ಚ – Rs. 1,72,073/–

ಅ) ಯಾವ ಉದ್ದೇಶಕ್ಕೆ ಬಳಸಲಾಗಿದೆ ತಿಳಿಸಿ

**ಉತ್ತರ:** ಅಧ್ಯಕ್ಷರು ಬ್ಯಾಂಕಿನ ಸಾಲದ ಪ್ರಕರಣದಲ್ಲಿ ಹರಾಜು ಪ್ರಕ್ರಿಯೆಯನ್ನು ಪತ್ರಿಕೆಯಲ್ಲಿ ಪ್ರಕಟಣೆ, ಬ್ಯಾಂಕಿನ ಕ್ಯಾಲೆಂಡರ್, ಹಾಗು ಹಿರಿಯ ನಿರ್ದೇಶಕರು

ದೈವಾದೀನರಾಗಿರುವುದು ಹಾಗು ಬ್ಯಾಂಕಿನ ವಾರ್ಷಿಕ ಸಭೆಯ ನೋಟೀಸ್,ಬ್ಯಾಂಕಿನ ಲೆಕ್ಕಪರಿಶೋಧನಾ ವರದಿ ಪ್ರಕಟಣೆ ಮಾಡಿರುವುದು ಈ ಎಲ್ಲಾ ವಿಷಯಕ್ಕೆ ಸಂಭಂದಿಸಿದಂತೆ ವೆಚ್ಚವಾಗಿದೆ ಎಂದು ಉತ್ತರ ನೀಡಿದರು.

ಆ) ಬ್ಯಾಂಕಿನಲ್ಲಿ ಯಾರಿಗೂ ಒಂದು ಡೈರಿ ಸಹ ನೀಡಿರುವುದಿಲ್ಲ.

**ಉತ್ತರ:** ಅಧ್ಯಕ್ಷರು ಮಾತನಾಡಿ ಬ್ಯಾಂಕಿನಲ್ಲಿ ವೆಚ್ಚ ಹೆಚ್ಚಾಗುತ್ತದೆ ಎಂದು ಮನಗಂಡ ಸಭೆಯು ಈ ವರ್ಷ ಯಾರಿಗೂ ಡೈರಿ ನೀಡಿರುವುದಿಲ್ಲ ಎಂದು ತಿಳಿಸಿದರು.

ಇ) ಆಡಳಿತ ಮಂಡಳಿಯವರೇ ಪ್ರತಿ ವರ್ಷ ಹೊಸ ವರ್ಷಕ್ಕೆ ರೂ. 5000 ರಿಂದ ರೂ. 10,000 ರವರೆಗೂ ಹಂಚಿಕೊಂಡಿರುತ್ತೀರಾ (ಮಾಜಿ ನಿರ್ದೇಶಕರ ಮಾಹಿತಿ ಮೇರೆಗೆ)

**ಉತ್ತರ:** ಅಧ್ಯಕ್ಷರು ಮಾತನಾಡಿ ಸತ್ಯಕ್ಕೆ ದೂರವಾಗಿದೆ ಹಾಗು ಆದಾರ ರಹಿತ ಆರೋಪವಾಗಿದೆ ಎಂದು ಹೇಳಿದರು

ಈ) ಆಡಳಿತ ಮಂಡಳಿ ನಿರ್ದೇಶಕರಿಗೆ ಅವರ ಹುಟ್ಟುಹಬ್ಬಕ್ಕೆ ಬೆಳ್ಳಿಯ ರೂಪದ 5 ರಿಂದ 10 ಸಾವಿರ ವರೆಗೂ ಉಡುಗೊರೆಯನ್ನು ನೀಡಿರುವುದು. ತಿಳಿದು ಬಂದಿದೆ. ಇದನ್ನು ಸಹ ಬ್ಯಾಂಕಿನ ಖರ್ಚಿನಿಂದ ಮಾಡಿರುತ್ತೀರಿ.

**ಉತ್ತರ:** ಬ್ಯಾಂಕಿನ ಹಿರಿಯ ನಿರ್ದೇಶಕರಿಬ್ಬರಿಗೆ 60 ವರ್ಷ ತುಂಬಿದ ನಿಮಿತ್ತ 2000 ಬೆಲೆ ಬಾಳುವ ಒಂದು ಬೆಳ್ಳಿ ಗಿಫ್ಟ್ ನೀಡಲಾಗಿದೆ.

2) ಪುಟ ಸಂಖ್ಯೆ 46 – ವಾಹನ ನಿರ್ವಹಣಾ ವೆಚ್ಚ ರೂ. 95,714/–

ಅ) ಬ್ಯಾಂಕಿನ ವಾಹನ office use ಗಿಂತಲೂ ವೈಯಕ್ತಿಕವಾಗಿ ಉಪಯೋಗವಾಗುತ್ತಿರುವುದು ಗಮನಕ್ಕೆ ಬಂದಿದೆ

**ಉತ್ತರ:** ಬ್ಯಾಂಕಿನ ಅಧ್ಯಕ್ಷರಿಗೆ ವಾಹನ ವ್ಯವಸ್ಥೆಯನ್ನು ಹಿಂದಿನ ಅಧ್ಯಕ್ಷರಾದ ದಿ.ಮಹದೇವಯ್ಯ, ಬೋರಯ್ಯ, ಎಲ್.ಶಿವಲಿಂಗಯ್ಯ, ಗಂಗಾಧರಯ್ಯ, ಅರುಂಧತಿ, ದೊಡ್ಡೀರಯ್ಯ ರವರುಗಳು ಉಪಯೋಗಿಸಿದಹಾಗೆ ನಾನು ವಾಹನವನ್ನು ಮನೆಯಿಂದ ವಿಧಾನಸೌಧ, ಸಹಕಾರ ಇಲಾಖೆ ಕಛೇರಿ ಹಾಗು ಬ್ಯಾಂಕಿಗೆ ಮಾತ್ರ ಉಪಯೋಗಿಸುತ್ತಿದ್ದೇನೆ ಎಂದು ತಿಳಿಸಿದರು.

ಆ) ಬ್ಯಾಂಕಿನ ಅಧ್ಯಕ್ಷರು ವಾಹನವನ್ನು ತಮ್ಮ ವೈಯಕ್ತಿಕ ಕೆಲಸಗಳಿಗಾಗಿ ಮೈಸೂರು, ತುಮಕೂರು ಆನೇಕಲ್ ಇನ್ನು ಹೆಚ್ಚಿನ ಸ್ಥಳಗಳಿಗೆ ಉಪಯೋಗಿಸಿರುವುದು ಸದಸ್ಯರಿಂದ ತಿಳಿದು ಬಂದಿರುತ್ತದೆ.

**ಉತ್ತರ:** ಇದು ಸತ್ಯಕ್ಕೆ ದೂರವಾದ ಆರೋಪ ದಾಖಲೆಗಳ ಸಹಿತ ಆರೋಪ ಮಾಡುವುದು ಉತ್ತಮ ಹಾಗು ಆನೇಕಲ್ ಗೆ ಒಂದು ಬಾರಿ ಬ್ಯಾಂಕಿನ ಸದಸ್ಯರ ಕೆಲಸದ ನಿಮಿತ್ತ ಹೊಗಿರುತ್ತೇನೆ.

ಇ) ಬ್ಯಾಂಕಿನ ವಾಹನವು Damage ಆಗಿರುವುದು ಕಂಡು ಬಂದಿರುತ್ತದೆ.

**ಉತ್ತರ:** ಬ್ಯಾಂಕಿನ ವಾಹನ ಅಪಘಾತವಾಗುವುದು ಸಹಜ ಸಣ್ಣ ಪುಟ್ಟ ಅಪಘಾತವಾಗಿದೆ ಆದರೆ ವಾಹನಕ್ಕೆ ಯಾವುದೇ ಅಪಘಾತವಾದಾಗ ವಿಮೆ ಸೌಲಭ್ಯ ಪಡೆದಿರುವುದಿಲ್ಲ.

ಈ) ವಾಹನ ನಿರ್ವಹಣೆಯು ಬ್ಯಾಂಕಿನ ಉದ್ದೇಶಕ್ಕಿಂತಲೂ ವೈಯಕ್ತಿಕ ಕೆಲಸಗಳಿಗೆ ತುಂಬಾ ಉಪಯೋಗವಾಗಿದೆ.

**ಉತ್ತರ:** ಸತ್ಯಕ್ಕೆ ದೂರವಾದ ಆರೋಪವಾಗಿದೆ.

ಉ) ವಾಹನಕ್ಕೆ ಜಿ.ಪಿ.ಎಸ್. ಅಳವಡಿಕೆಯನ್ನು ಸಹ ಅಧ್ಯಕ್ಷರು ತೆಗೆದು ಹಾಕಿಸಿರುತ್ತಾರೆ.

**ಉತ್ತರ:** ಬ್ಯಾಂಕಿನ ಅಧ್ಯಕ್ಷರ ವಾಹನಕ್ಕೆ ಜಿ.ಪಿ.ಎಸ್ ವ್ಯವಸ್ಥೆ ಇರುವುದಿಲ್ಲ ಆದರೆ ಇನ್ನು ಮುಂದೆ ಜಿ.ಪಿ.ಎಸ್ ವ್ಯವಸ್ಥೆ ಕಲ್ಪಿಸಲಾಗುವುದು.

ಊ) ವಾಹನ ನಿರ್ವಹಣೆಯ ಲಾಗ್ ಪುಸ್ತಕ ಅನ್ನು Maintained ಮಾಡಿರುವುದನ್ನು ಸಭೆಯ ಸದಸ್ಯರಿಗೆ ಹಾಜರುಪಡಿಸಬೇಕು.

**ಉತ್ತರ:** ಪ್ರತೀ ತಿಂಗಳು ಲೆಕ್ಕಪರಿಶೋಧನಾ ಸಮಿತಿಗೆ ಸಿ.ಈ.ಓ, ಮತ್ತು ಲೆಕ್ಕಿಗರು ಇವರ ಲಾಗ್ ಪುಸ್ತಕವನ್ನು ಪರಿಶೀಲಿಸಿ ವರದಿ ನೀಡುತ್ತಿರುತ್ತಾರೆ ಅದನ್ನು ಸಮಿತಿಯ ಸದಸ್ಯರೆಲ್ಲರೂ ಪರಿಶೀಲಿಸಿ ಅನುಮೋದನೆ ನೀಡಿರುತ್ತಾರೆ ಎಂದು ತಿಳಿಸಿದರು.

3) ಪುಟ ಸಂಖ್ಯೆಯೆ 46 – ವಾಹನ ಇಂಧನ ವೆಚ್ಚ ರೂ. 3,01,912/–

ಅ) ಬ್ಯಾಂಕಿನಲ್ಲಿ 2 ವಾಹನಗಳಿದ್ದು ಒಂದರಲ್ಲಿ Recovery Batch ಗೆ ಇದ್ದರೆ ಮತ್ತೊಂದು ಅಧ್ಯಕ್ಷರವರಿಗೆ ಇರುತ್ತದೆ.

**ಉತ್ತರ:** ಹೌದು ಸರಿಯಾದ ಮಾಹಿತಿ 2 ವಾಹನಗಳಲ್ಲಿ ಒಂದು ವಾಹನ ವಸೂಲಾತಿಗೆ ಮತ್ತೊಂದು ಅಧ್ಯಕ್ಷರಿಗೆ ನಿಡಲಾಗುತ್ತಿದೆ.

ಆ) ಅಧ್ಯಕ್ಷರ ರವರು ವಾಹನವನ್ನು Official ಆಗಿ ಉಪಯೋಗಿಸಿ ಎಷ್ಟು ಠೇವಣಿ ಸಂಗ್ರಹ ಮಾಡಿರುತ್ತಾರೆ.

**ಉತ್ತರ:** ಕಳೆದ ಸಾಲಿನಲ್ಲಿ ಇದ್ದ ಠೇವಣಿ ಹಾಗು ಪ್ರಸ್ತುತ ಅವದಿಯಲ್ಲಿ ಇರುವ ಠೇವಣಿ ಹಣ ಹೆಚ್ಚಾಗಿದ್ದು ಇದಕ್ಕೆ ನಾನು ಕೂಡ ಠೇವಣಿ ಸಂಗ್ರಹಿಸಲು ಶ್ರಮಿಸಿದ್ದೇನೆ ಎಂದು ಅಧ್ಯಕ್ಷರು ಹೇಳಿದರು.

ಇ) ಯಾವ ಸಂಘ ಸಂಸ್ಥೆಯಿಂದ ಎಷ್ಟು ಠೇವಣಿ ಮಾಡಿಸಿರುತ್ತಾರೆ.

**ಉತ್ತರ:** ಸಂಘ ಸಂಸ್ಥೆಗೆ ಅನೇಕ ಪತ್ರ ನೀಡಿದ್ದೇವು ಆದರೆ ಕಾನೂನಿಡಿಯಲ್ಲಿ ಕೋ–ಆಪ್ ಬ್ಯಾಂಕ್ ನಲ್ಲಿ ಠೇವಣಿ ಇಡಲು ನಿರ್ಭಂದ ಇರುವುದರಿಂದ ಠೇವಣಿ ಇಟ್ಟಿರುವುದಿಲ್ಲ.

ಈ) ಅಧ್ಯಕ್ಷರ ರವರು ಸ್ನೇಹಿತರಾದ ಗುರುಪ್ರಸಾದ್ ಎಂಬುವವರ Family ಯವರಿಗೆ ಬ್ಯಾಂಕಿನ ವಾಹನ ಉಪಯೋಗಿಸಿರುವುದು ಕಂಡು ಬಂದಿರುತ್ತದೆ.

**ಉತ್ತರ:** ಅಧ್ಯಕ್ಷರು ಮಾತನಾಡಿ ನನ್ನ ಸ್ನೇಹಿತರಾದ ಗುರುಪ್ರಸಾದ್ ರವರು ನಮ್ಮ ಮನೆಯ ಹತ್ತಿರ ಇರುವುದರಿಂದ ಅವರು ನನ್ನ ಜೊತೆಯಲ್ಲಿ ಒಂದು ಬಾರಿ ಬಂದಿರುತ್ತಾರೆ ಆದರೆ ಅವರ ಕುಟುಂಬದವರಿಗೆ ಬ್ಯಾಂಕಿನ ವಾಹನ ಉಪಯೋಗಿಸಲು ನೀಡಿರುವುದಿಲ್ಲ ಎಂದು ತಿಳಿಸಿದರು.

ಉ) ಬ್ಯಾಂಕಿನ ಸಲಹೆಗಾರರಿಗೆ ಸಂಬಳ ನೀಡಿದರು ಅವರಿಗೆ ಮನೆಗೆ ವಾಹನ ಕಳುಹಿಸಿ ಬ್ಯಾಂಕಿಗೆ ಕರೆತರುವುದು ಎಷ್ಟು ಸರಿ.

**ಉತ್ತರ:** ಕೆಲವು ಸಂಧರ್ಭದಲ್ಲಿ ಅವಷ್ಯಕತೆ ಇದ್ದಾಗ ಮಾತ್ರ ವಾಹನ ಕಳುಹಿಸಿದ್ದೇವೆ ಉಳಿದ ಸಮಯದಲ್ಲಿ ಅವರು ತಮ್ಮ ವಾಹನದಲ್ಲಿ ಬ್ಯಾಂಕಿಗೆ ಬರುತ್ತಾರೆ ಎಂದು ಹೇಳಿದರು.

ಊ) ಯಾವುದಾದರೂ ಸಹಿ ಬೇಕಾದರೂ ಅವರ ಮನೆಗೆ ವಾಹನದಲ್ಲಿ ಕಳುಹಿಸುವುದು ಎಷ್ಟು ಸರಿ.

**ಉತ್ತರ:** ಬ್ಯಾಂಕಿನ ಹಿತದೃಷ್ಟಿಯಿಂದ ಕೆಲವು ತುರ್ತು ಸಂದರ್ಭದಲ್ಲಿ ವಾಹನ ಕಳುಹಿಸಿ ಸಹಿ ಪಡೆದಿದ್ದೇವೆ ಎಂದು ಹೇಳಿದರು.

ಋ) ಅಧ್ಯಕ್ಷರು ತಮ್ಮ ಹೆಂಡತಿ ಮಕ್ಕಳು ಜೊತೆ ಮೈಸೂರಿನ ಚಾಮುಂಡಿ ಬೆಟ್ಟ ಸುತ್ತುವರಿಯಲು ಬ್ಯಾಂಕಿನ ವಾಹನವನ್ನು ಬಳಸಿರುವುದು ವಿಪರ್ಯಾಸ.

**ಉತ್ತರ:** ಸತ್ಯಕ್ಕೆ ದೂರವಾದ ಹಾಗು ಆದಾರ ರಹಿತವಾದ ಆರೋಪವಾಗಿದೆ.

ಎ) ಚುನಾವಣೆ ಸಂದರ್ಭದಲ್ಲಿ ಕೆ.ಶಿವರಾಂರವರು ಚುನಾವಣಾ ಪ್ರಚಾರಕ್ಕೆ ಆನೇಕಲ್ ಪ್ರದೇಶದದ್ಯಾಂತ ನಮ್ಮ ಬ್ಯಾಂಕಿನ ವಾಹನ ಬಳಸಿರುವುದು ಖಂಡನೀಯ.

**ಉತ್ತರ:** ಆನೇಕಲ್ ವಿಧಾನ ಸಭಾ ಕ್ಷೇತ್ರಕ್ಕೆ ಕೆ.ಶಿವರಾಂ ರವರು ಚುನಾವಣೆಯಲ್ಲಿ ಸ್ಪರ್ದಿಸಿಲ್ಲ ನಾನು ಕೆ.ಶಿವರಾಂ ರವರ ಚುನಾವಣಾ ಪ್ರಚಾರಕ್ಕೆ ವಾಹನ ಉಪಯೋಗಿಸಿರುವುದಿಲ್ಲ ಎಂದು ಅಧ್ಯಕ್ಷರು ಸ್ಪಷ್ಟಪಡಿಸಿದರು.

ಏ) ಬ್ಯಾಂಕಿನ ಉಪಯೋಗಕ್ಕಿಂತ ಅಧ್ಯಕ್ಷರ ವೈಯಕ್ತಿಕ ಕೆಲಸಗಳಿಗಾಗಿ ವಾಹನ ಇಂಧನ ವೆಚ್ಚ ಖರ್ಚಾಗಿರುತ್ತದೆ.

**ಉತ್ತರ:** ಸತ್ಯಕ್ಕೆ ದೂರವಾದ ಆರೋಪವಾಗಿದೆ.

4) ಪುಟ ಸಂಖ್ಯೆ 48– ಸರ್ವಸದಸ್ಯರ ವಾರ್ಷಿಕ ಸಾಮಾನ್ಯ ಸಭೆ ವೆಚ್ಚ ರೂ. 3,97,989/–

ಅ) Virtual Meeting ಆಗಿದ್ದರು ಇಷ್ಟು ಖರ್ಚು ಆಯ್ತಾ ?

**ಉತ್ತರ:** ಈಗಾಗಲೆ ವರ್ಚುವಲ್ ಸಭೆ ಏಕೆ ಕ್ಲಬ್ ನಲ್ಲಿ ನಡೆಸಿದ್ದೇವೆ ಎಂದು ಸ್ಪಷ್ಟಪಡಿಸಿದ್ದೇವೆ ಅಲ್ಲದೆ ವಾರ್ಷಿಕ ಸಭೆಯನ್ನು 2021-22 ರಲ್ಲಿ ಬ್ಯಾಂಕಿನಲ್ಲಿ ನಡೆದಾಗ ರೂ.347307.00 ಖರ್ಚುಆಗಿರುತ್ತದೆ, ಕಳೆದ ಭಾರಿ ಕ್ಲಬ್ ನಲ್ಲಿ ನಡೆದಿರುವುದರಿಂದ ರೂ.397989.00 ವೆಚ್ಚವಾಗಿರುತ್ತದೆ ಎಂದು ಹೇಳಿದರು.

ಆ) ಬ್ಯಾಂಕ್ ನಲ್ಲೆ ನಡೆಸಬಹುದಾಗಿದ್ದ ಸಭೆಯನ್ನು ಕ್ಲಬ್‌ನಲ್ಲಿ ಯಾಕೆ ನಡೆಸಬೇಕಿತ್ತು?

**ಉತ್ತರ:** ಈಗಾಗಲೆ ವರ್ಚುವಲ್ ಸಭೆ ಏಕೆ ಕ್ಲಬ್ ನಲ್ಲಿ ನಡೆಸಿದ್ದೇವೆ ಎಂದು ಸ್ಪಷ್ಟಪಡಿಸಿದ್ದೇವೆ

ಇ) ಸಲಹೆಗಾರ ರವರ ಕ್ಲಬ್ ಎಂಬ ಮನ್ನಣೆಯಾ ?

**ಉತ್ತರ:** ಈಗಾಗಲೆ ವರ್ಚುವಲ್ ಸಭೆ ಏಕೆ ಕ್ಲಬ್ ನಲ್ಲಿ ನಡೆಸಿದ್ದೇವೆ ಎಂದು ಸ್ಪಷ್ಟಪಡಿಸಿದ್ದೇವೆ

5) ಪುಟ ಸಂಖ್ಯೆ 48 – ಆದಾಯ ತೆರಿಗೆ ರೂ. 38,99,100/–

ಅ) ಸಿಬ್ಬಂದಿ ವರ್ಗದವರಿಗೆ ಕಾಲಕಾಲಕ್ಕೆ ನೀಡುವ ಆ.ಂ, Increment, E.L. Encashment ನೀಡಿದರೆ ಇಷ್ಟೊಂದು ತೆರಿಗೆ ಅವಶ್ಯಕತೆ ಇರಲಿಲ್ಲ.

**ಉತ್ತರ:** ಬ್ಯಾಂಕಿನ ಆದಾಯ ತೆರಿಗೆಯನ್ನು ಬ್ಯಾಂಕಿನ ಆದಾಯ ಮೇಲೆ ನಿರ್ಧರಿತವಾಗಿರುತ್ತದೆ ಅಲ್ಲದೆ ಬ್ಯಾಂಕಿಗೆ ಈ ವರ್ಷ 9.50 ಕೋಟಿ ಒಟ್ಟು ಆದಾಯ ಬಂದಿರುತ್ತದೆ ಇದರ ವಿವರಣೆ ಪುಟ ಸಂಖ್ಯೆ 45 ಆದಾಯದ ವಿವರದಲ್ಲಿದೆ ಪುಟ ಸಂಖ್ಯೆ 44 ರಿಂದ 48 ರ ಪುಟದಲ್ಲಿ ವೆಚ್ಚದ ವಿವರ ಇರುತ್ತದೆ ಇದರಲ್ಲಿ ಎಲ್ಲಾ ವೆಚ್ಚ ಕಳೆದು ಬ್ಯಾಂಕಿಗೆ ರೂ.83.33 ಲಕ್ಷ ನಿವ್ವಳ ಆದಾಯ ಬಂದಿರುತ್ತದೆ. ತಾವು ಹೇಳಿದಂತೆ ಬ್ಯಾಂಕಿಗೆ ಕಳೆದ ವರ್ಷ ಲಾಭಾಂಶ ಕಡಿಮೆ ಬಂದ ಹಿನ್ನೆಲೆಯಲ್ಲಿ ಡಿ.ಎ, ವೇತನ ಬಡ್ತಿ, ಗಳಿಕೆ ರಜೆ ನಗದೀಕರಣ ನೀಡಿರಲಿಲ್ಲ ಆದರೆ ಈ ವರ್ಷ ಸಿಬ್ಬಂದಿಯವರಿಗೆ ನೀಡಬೇಕಾದ ಡಿ.ಎ, ಗಳಿಕೆ ರಜೆ ನೀಡಿದ್ದೇವೆ ವೇತನ ಬಡ್ತಿ ನೀಡುವ ಕುರಿತು ಈ ತಿಂಗಳ ಅಂತ್ಯದಲ್ಲಿ ನಿರ್ಧರಿಸಲಾಗುವುದು ಎಂದು ಸ್ಪಷ್ಟೀಕರಣ ನೀಡಿದರು.

ಇ) ಸಿಬ್ಬಂದಿಗಳಿಗೆ ಹೆಚ್ಚುವರಿ ಸಂಬಳ ನೀಡಬಹುದಿತ್ತು

**ಉತ್ತರ:** ಬ್ಯಾಂಕಿನ ನಿಯಮಾವಳಿಯಂತೆ ಸಿಬ್ಬಂದಿ ವೆಚ್ಚ ಶೇಕಡಾ 2% ಮೀರಭಾರದು ಅದರಂತೆ ಪ್ರಸ್ತುತ ಸಿಬ್ಬಂದಿ ವೆಚ್ಚ 1.87% ಇರುವುದರಿಂದ ಈ ಕುರಿತು ಕೂಲಂಕುಶವಾಗಿ ಆಡಳಿತ ಮಂಡಳಿ ಪರಿಶೀಲಿಸಿ ಕ್ರಮ ಕೈಗೊಳ್ಳಲಾಗುವುದು ಎಂದು ಹೇಳಿದರು.

ಈ) ಸಲಹೆಗಾರರು ಯಾವ ಸಲಹೆಯನ್ನು ನೀಡಲಿಲ್ಲವಾ.

**ಉತ್ತರ:** ಸಲಹೆಗಾರರು ವಸೂಲಾತಿ ಸಿಬ್ಬಂದಿಯೊಂದಿಗೆ ಪ್ರತೀ ತಿಂಗಳಿ ಸಭೆ ನಡೆಸಿ ಎನ್.ಪಿ.ಎ ಪ್ರಮಾಣದ ಬಗ್ಗೆ, ವಸೂಲಾತಿ ಬಗ್ಗೆ ಸಿಬ್ಬಂದಿಯವರಿಂದ ವಿವರಣೆ ಪಡೆದು ಎನ್.ಪಿ.ಎ ಪ್ರಮಾಣ ಕಡಿಮೆ ಮಾಡಲು ಶ್ರಮಿಸಿದ್ದಾರೆ ಹಾಗು ಬ್ಯಾಂಕಿಗೆ ರೂ.83.33 ಲಕ್ಷ ಆದಾಯ ಬರಲು ಅವರದು ಪಾತ್ರವಿರುವುದಾಗಿ ಹೇಳಿದರು.

ಉ) ದುಡಿಯುವ ಕಾರ್ಮಿಕರಿಗೆ ಸರಿಯಾದ ಸಮಯದಲ್ಲಿ Benefit ಯಾಕೆ ನೀಡುತ್ತಿಲ್ಲ?

**ಉತ್ತರ:** ಎಲ್ಲಾ ಸೌಲಭ್ಯ ನೀಡುತ್ತಿದ್ದೇವೆ.

ಊ) 4 ವರ್ಷಗಳ Increment ಯಾಕೆ ನೀಡಿಲ್ಲ? ಸಿ.ಈ.ಓ ಮತ್ತು ಅಧ್ಯಕ್ಷರು ಉತ್ತರಿಸಬೇಕು.

**ಉತ್ತರ:** ಬ್ಯಾಂಕಿನ ಹಣಕಾಸಿನ ಪರಿಸ್ಥಿತಿಗನುಗುಣವಾಗಿ ಕಾಲ ಕಾಲಕ್ಕೆ ವೇತನ ಬಡ್ತಿ ನೀಡಲಾಗುವುದು.

6) ಪುಟ ಸಂಖ್ಯೆ 48 – ಕಾನೂನು ವೆಚ್ಚ ರೂ. 45,000/–

ಅ) ಯಾವ ಉದ್ದೇಶಕ್ಕಾಗಿ ಇಷ್ಟು ಖರ್ಚಾಗಿದೆ.

**ಉತ್ತರ:** ಬ್ಯಾಂಕಿನ ಚಕ್ ಬೌನ್ಸ ಪ್ರಕರಣಕ್ಕೆ, ಬ್ಯಾಂಕಿನ ಸ್ಥಿರಾಸ್ಥಿ ಸಾಲದ ಪ್ರಕರಣಕ್ಕೆ ಹಾಗು ಹೆಚ್.ಬಿ.ಆರ್ ಬಡಾವಣೆಯಲ್ಲಿ ಇರುವ ನಿವೇಶನ ವಿಚಾರಕ್ಕೆ ಸಂಭಂದಿಸಿದಂತೆ ಕಾನೂನು ವೆಚ್ಚವಾಗಿದೆ ಎಂದು ಹೇಳಿದರು.

7) ಪುಟ ಸಂಖ್ಯೆ 48 – ಸಮವಸ್ತ್ರ ಖಾತೆ ರೂ. 2,90,296/–

ಅ) ಬ್ಯಾಂಕ್ ಎಲ್ಲಾ ರೀತಿಯಲ್ಲೂ ಸಮೃದ್ಧಿಯಾಗಿಲ್ಲ ಇದರ ಖರ್ಚ ಅವಶ್ಯಕತೆ ಏನಿತ್ತು ?

**ಉತ್ತರ:** ಬ್ಯಾಂಕಿನಲ್ಲಿ ಶಿಸ್ತು ತರುವುದು ಬ್ಯಾಂಕಿನ ಅಧ್ಯಕ್ಷರಾದ ನನ್ನ ಜವಾಬ್ದಾರಿಯಾಗಿತ್ತು ಆದ್ದರಿಂದ ಎಲ್ಲಾ ಸಿಬ್ಬಂದಿಗೆ ಸಮವಸ್ತ್ರ ನೀಡುತ್ತಿದ್ದೇವೆ.

ಆ) ಬಟ್ಟೆಗಳ Quality & Quantity ಅಷ್ಟೊಂದು ತೃಪ್ತಿ ಇಲ್ಲ.

**ಉತ್ತರ:** ಸಮವಸ್ತ್ರ ವನ್ನು ವೆಂಕಟೇಶ್ವರ ಟೆಕ್ಸಟೈಲ್ಸ ನಲ್ಲಿ ಪ್ರತೀವರ್ಷ ತರುತಿದ್ದೇವೆ ಇದನ್ನು ಬ್ಯಾಂಕಿನ ಹಿರಿಯ ಅದಿಕಾರಿಗಳು ಸಮವಸ್ತ್ರವನ್ನು ಪರಿಶೀಲಿಸಿ ಆಯ್ಕೆಮಾಡುತ್ತಾರೆ ಎಂದು ಹೇಳಿದರು.

8) ಪುಟ ಸಂಖ್ಯೆ 48 – ನಿವ್ವಳ ಲಾಭ ರೂ. 83,33,264.65/–

ಅ) ಇಷ್ಟೆಲ್ಲಾ ಲಾಭ ಯಾವುದರ ಮೂಲಗಳಿಂದ ಬಂದಿರುತ್ತದೆ ?

**ಉತ್ತರ:** ಈಗಾಗಲೆ ಲಾಭ ಯಾವುದರ ಮೂಲಗಳಿಂದ ಬಂದಿರುತ್ತದೆ ಎಂದು ಸ್ಪಷ್ಟಪಡಿಸಿದ್ದೇವೆ.

1) ಸಿಬ್ಬಂದಿಯವರಿಗೆ D.A., Encashment ಎಲ್ಲಾ ತಡೆ ಹಿಡಿದು ಲಾಭ ತೋರಿಸಿರುತ್ತೀರಿ

**ಉತ್ತರ:**ಸುಳ್ಳು ಮಾಹಿತಿಯಾಗಿರುತ್ತದೆ.

2) Below 1000 ಷೇರು ಮೊತ್ತದ ಹಣವನ್ನು ರದ್ದುಗೊಳಿಸಿ ಲಾಭ ತೋರಿಸಿರುತ್ತೀರಿ.

**ಉತ್ತರ:** ಷೇರು ಕಡಿಮೆ ಇರುವ ಸದಸ್ಯರ ಸದಸ್ಯತ್ವವನ್ನು ನಿಯಮಾವಳಿಯಂತೆ ರಿಸರ್ವ ಫಂಡ್ ಗೆ ವರ್ಗಾಹಿಸಿರುತ್ತೇವೆ.

3) Pre Closure Loan 2% ಮೊತ್ತದ ಹಣವನ್ನು ಲಾಭ ಎಂದು ತೋರಿಸಿರುತ್ತೀರಿ.

**ಉತ್ತರ:** ಬೇರೆ ಬ್ಯಾಂಕಿನಲ್ಲಿ Pre Closure Loan Charges 4% ಗಿಂತ ಅದಿಕವಾಗಿರುತ್ತದೆ ಆದರೆ ನಮ್ಮ ಬ್ಯಾಂಕಿನಲ್ಲಿ ಶೇಕಡಾ 2% Pre Closure ವೆಚ್ಚ ನಿಗದಿ ಮಾಡಿದ್ದೇವೆ ಇದನ್ನು ಬ್ಯಾಂಕಿನ ಹಿತದೃಷ್ಟಿಯಿಂದ ಮಾಡಿದ್ದೇವೆ ಎಂದು ಹೇಳಿದರು.

4) 4 ವರ್ಷಗಳ Encashment Arrears ಹಣವನ್ನು ಲಾಭ ಎಂದು ತೋರಿಸಿರುತ್ತೀರಿ.

**ಉತ್ತರ:** ಸುಳ್ಳು ಮಾಹಿತಿಯಾಗಿರುತ್ತದೆ.

5) ಇನ್ನಿತರ ಆದಾಯದ ಮೂಲಗಳನ್ನು (Divident ಪಡೆಯದೇ ಇರುವವರು ಖಾತೆಯಿಂದ Deaf Olds ಮೊತ್ತವನ್ನು Unclaimed Pay Order, etc.,) ಲಾಭ ಎಂದು ಪರಿಗಣಿಸಿರುತ್ತೀರಿ.

**ಉತ್ತರ:** ಮೂರು ವರ್ಷ ಡಿವಿಡೆಂಡ್ ಪಡೆಯದೇ ಇರುವ ಹಣವನ್ನು ನಿಯಮಾವಳಿಯಂತೆ ರಿಸರ್ವ ಫಂಡ್‌ಗೆ ವರ್ಗಾವಣೆ ಮಾಡುತ್ತೇವೆ.

6) Audit ನಲ್ಲಿ 'ಎ' RBI ನಲ್ಲಿ "ಎ" ಎನ್.ಪಿ.ಎ. ನಲ್ಲಿ Urban CO-op., Bank 2 ಸ್ಥಾನ ಎಂಬ ಸ್ಥಾನಗಳನ್ನು ಪಡೆದರೆ ಸಿಬ್ಬಂದಿಯವರಿಗೆ ಯಾಕೆ Interim Salary ಎಂದು ಕೊಡಬಾರದು

**ಉತ್ತರ:** ರಿಸರ್ವ ಬ್ಯಾಂಕ್ Audit ನಲ್ಲಿ 'ಬಿ' ವರ್ಗದಲ್ಲಿ ವರ್ಗೀಕರಣ ಮಾಡಿದ್ದಾರೆ ಎನ್.ಪಿ.ಎ. ನಲ್ಲಿ Urban CO-op., ಗಳಲ್ಲಿ ನಮ್ಮ ಬ್ಯಾಂಕ್ 2ನೇ ಸ್ಥಾನ ಇದೆ ಎಂದು ಹೆಮ್ಮೆಯಿಂದ ಹೇಳಲು ಬಯಸುತ್ತೇವೆ. ರಿಸರ್ವ ಬ್ಯಾಂಕ್ Audit ನಲ್ಲಿ 'ಬಿ' ವರ್ಗ, ಎನ್.ಪಿ.ಎ. ನಲ್ಲಿ Urban CO-op., Bank ಗಳಲ್ಲಿ ನಮ್ಮ ಬ್ಯಾಂಕ್ 2ನೇ ಸ್ಥಾನ ಪಡೆದ ಮಾತ್ರಕ್ಕೆ ಸಿಬ್ಬಂದಿಯವರಿಗೆ Interim Salary ನೀಡಬೇಕೆಂದು ಯಾವುದೇ ಕಾನೂನಿನಲ್ಲಿ ಇರುವುದಿಲ್ಲ ಅಲ್ಲದೆ ಬ್ಯಾಂಕಿನ ಹಣಕಾಸಿನ ಸ್ಥಿತಿಗತಿಯನ್ನು ಕೂಲಂಕುಶವಾಗಿ ಪರಿಶೀಲಿಸಿ ಎಲ್ಲಾ ಸಿಬ್ಬಂದಿಯವರಿಗೆ ಎಲ್ಲಾ ಆರ್ಥಿಕ ಸೌಲಭ್ಯ ನೀಡಿದ್ದೇವೆ ಎಂದು ಹೇಳಿದರು

7) ನನ್ನ ಅವದಿಯಲ್ಲಿ ಸಾಧನೆ ಮಾಡಿರುವೆ ಎಂಬ ಹೆಗ್ಗಳಿಕೆನಾ ?

**ಉತ್ತರ:** ಆ ರೀತಿ ನಿಮ್ಮ ಕಲ್ಪನೆ ನನ್ನ ಒಬ್ಬನ ಸಾದನೆಯಲ್ಲಾ ನನ್ನ ಆಡಳಿತ ಮಂಡಳಿ ಮತ್ತು ಸಿಬ್ಬಂದಿಯವರ ಪರಿಶ್ರಮದಿಂದ ಬ್ಯಾಂಕ್ ಉನ್ನತ ಮಟ್ಟಕ್ಕೆ ತಲುಪುತ್ತಿದೆ ಎಂದು ಹೇಳಿದರು.

9) ಪುಟ ಸಂಖ್ಯೆ 48 – ಸಿಬ್ಬಂದಿ ಮತ್ತು ನಿರ್ದೇಶಕರ ತರಬೇತಿ ವೆಚ್ಚ ರೂ. 57,627/–

ಅ) 4 ಜನ ನಿರ್ದೇಶಕರು ಶಿರ್ಸಿ ತರಬೇತಿ ಎಂಬ ಕಾರಣದಲ್ಲಿ ಬ್ಯಾಂಕಿನ ವಾಹನವನ್ನು ಉಪಯೋಗಿಸುವುದು ಎಷ್ಟು ಸಮಂಜಸ.

**ಉತ್ತರ:** ನಿರ್ದೇಶಕರ ತರಬೇತಿ ವೆಚ್ಚ 24000 ಹಾಗು ಬ್ಯಾಂಕಿನ ಕೆಲ ಸಿಬ್ಬಂದಿಯವರು ಜಿ.ಡಿ.ಸಿ ಕೋರ್ಸ ವೆಚ್ಚವಾಗಿರುವುದಾಗಿ ಸ್ಪಷ್ಟೀಕರಣ ನೀಡಿದರು.

ಆ) ಸಾಮಾಜಿಕ ಜಾಲತಾಣದಲ್ಲಿ ತಮ್ಮೆಲ್ಲರ ಮೋಜು ಮಸ್ತಿ ಬಿತ್ತಿರವಾಗಿತ್ತು.

**ಉತ್ತರ:** ನನ್ನ ವೈಯಕ್ತಿಕ ವಿಚಾರ ಇಲ್ಲಿ ಪ್ರಸ್ತಾಪ ಮಾಡುವುದು ಸಮಂಜಸವಲ್ಲ.

ಇ) ತರಬೇತಿ ಹೆಸರಿನಲ್ಲಿ ಅನಾವಶ್ಯಕ ಖರ್ಚು ಅಗತ್ಯವೆ ?

**ಉತ್ತರ:** ಬ್ಯಾಂಕಿನಲ್ಲಿ ಅವಶ್ಯಕ ವೆಚ್ಚವಾಗಿದೆ ಹೊರತು ಯಾವುದೇ ಅನಾವಶ್ಯಕ ವೆಚ್ಚವಾಗಿರುವುದಿಲ್ಲ.

10) ಸಿ.ಈ.ಓ ನೇಮಕಾತಿಯಲ್ಲಿ ಅವ್ಯವಹಾರ :–

ಅ) ಇವರು ಕೇವಲ ಕಿರಿಯ ಸಹಾಕರಾಗಿರುವ ಅಭ್ಯರ್ಥಿಯನ್ನು ಆಯ್ಕೆ ಮಾಡಿರುತ್ತೀರಿ.

**ಉತ್ತರ:** ಈಗ ಇರುವ ಸಿ.ಈ.ಓ. ರವರು 6 ವರ್ಷ ಸೇವಾ ಅನುಭವ ಇರುವುದರಿಂದ ಅವರನ್ನು ಸಿ.ಈ.ಓ ಹುದ್ದೆಗೆ ಆಯ್ಕೆ ಮಾಡಲಾಗಿದೆ ಎಂದು ಹೇಳಿದರು.

ಆ) ಇವರಿಗೆ ಸಂಸ್ಥೆಯಲ್ಲಿ ಕೇವಲ 5 ವರ್ಷ ಅನುಭವ ಇರುವ ವ್ಯಕ್ತಿ ಯಾವುದೇ "Officer Grade" ವ್ಯವಹಾರ ಜ್ಞಾನವಿರುವುದಿಲ್ಲ.

**ಉತ್ತರ:** ಇದಕ್ಕೆ ನಿರ್ದೇಶಕರಾದ ಶ್ರೀ.ದೊಡ್ಡೀರಯ್ಯರವರು ಮಾತನಾಡಿ ಬ್ಯಾಂಕಿನಲ್ಲಿ 6 ವರ್ಷ ಅನುಭವ ಇದೆ ಅಲ್ಲದೆ ಇವರು ಬಿ.ಕಾಂ ಪದವಿ ಜೊತೆಗೆ ಕಾನೂನು ಸ್ನಾತಕೊತ್ತರ ಪದವಿ ಪಡೆದಿರುವುದರಿಂದ ಬ್ಯಾಂಕಿಗೆ ಸಹಾಯವಾಗುವ ನಿಟ್ಟಿನಲ್ಲಿ ನಿಯಮಾವಳಿಯಂತೆ ಜಂಟಿ ನಿರ್ದೇಶಕರ ಸಮ್ಮುಖದಲ್ಲಿ ಇವರನ್ನು ಆಯ್ಕೆ ಸಮಿತಿ ಆಯ್ಕೆ ಮಾಡಿದ್ದಾರೆ ಎಂದು ತಿಳಿಸಿದರು.

ಇ) ಬ್ಯಾಂಕಿನಲ್ಲಿ ಅನೇಕ ಹಿರಿಯರು, ಅನುಭವವಿರುವವರು ಇದ್ದರೂ ಸಹ ಅವರಿಗೆ ಮಾನ್ಯತೆ ನೀಡದೆ ಆಯ್ಕೆ ಮಾಡಿರುತ್ತೀರಿ.

**ಉತ್ತರ:** ಬ್ಯಾಂಕಿನಲ್ಲಿ ಅನುಭವ ಇರುವ ಮಾತ್ರಕ್ಕೆ ಸಿ.ಈ.ಓ ಹುದ್ದೆ ನೀಡಲು ಬರುವುದಿಲ್ಲ, ನಿಯಮಾವಳಿಯಂತೆ ಪತ್ರಿಕಾ ಪ್ರಕಟಣೆ ನೀಡಿ ಇವರನ್ನು ಆಯ್ಕೆ ಮಾಡಲಾಗಿದೆ

ಈ) ನಮ್ಮ ಜಾತಿಯ ಸಂಸ್ಥೆಯಲ್ಲಿ ಬೇರೆಯವರಿಗೆ ಪ್ರಾಧನ್ಯತೆ ನೀಡಿರುತ್ತೀರಿ.

**ಉತ್ತರ:** ಇದಕ್ಕೆ ನಿರ್ದೇಶಕರಾದ ಶ್ರೀ.ದೊಡ್ಡೀರಯ್ಯರವರು ಮಾತನಾಡಿ ಭಾರತೀಯ ರಿಸರ್ವ ಬ್ಯಾಂಕ್ ಜಾತಿ ಆದಾರದ ಮೇಲೆ ಲೈಸೆನ್ಸ ನೀಡುವುದಿಲ್ಲ ಅಲ್ಲದೆ ಇದು ಒಂದು ಸಾರ್ವಜನಿಕ ಸಂಸ್ಥೆಯಾಗಿರುವುದರಿಂದ ಇಲ್ಲಿ ಜಾತಿ ಎಂಬ ಪದ ಬಳಕೆ ಅಪ್ರಸ್ತುತ ಅಲ್ಲದೆ ಇವರು ಹಿಂದುಳಿದ ವರ್ಗಕ್ಕೆ ಸೇರಿದವರಾಗಿರುತ್ತಾರೆ ಎಂದು ಸ್ಪಷ್ಟಪಡಿಸಿದರು.

ಉ) ಪದವಿ, ಸ್ನಾತಕೋತ್ತರ ಪದವಿ, ಅನುಭವ ಇಲ್ಲಾ ವರ್ಗದ ಸಿಬ್ಬಂದಿಯವರು ಇದ್ದರೂ ಅವರಿಗೆ ಮನ್ನಣೆ ಇಲ್ಲ ಹಾಗೂ 2 ವರ್ಷ Professional Period ಇದ್ದರೂ ಕೇವಲ 1 ವರ್ಷಕ್ಕೆ Permanent ಮಾಡಿರುತ್ತಾರೆ.

**ಉತ್ತರ:** ಕೆ.ಸಿ.ಎಸ್ ನಿಯಮಾವಳಿಯಂತೆ ಒಂದು ವರ್ಷಕ್ಕೆ ಇವರ ಸೇವೆಯನ್ನು ಖಾಯಂಗೊಳಿಸಲಾಗಿದೆ.

11) ಇತರೇ ವಿಷಯಗಳು :–

ಅ) ಸಿದ್ದರಾಜ ಎಸ್. ರವರು ಅಧ್ಯಕ್ಷರಾದ ಮೇಲೆ ಕೆಲವು ಸಿಬ್ಬಂದಿ ವರ್ಗದವರಿಗೆ ಹೆದರಿಸಿ, ದಮ್ಕಿ ಹಾಕಿ ಅವರ Valentary Retirement ತೆಗೆದು ಕೊಳ್ಳುವಂತೆ ಅವರ ಹೊಟ್ಟೆ ಮೇಲೆ ಹೊಡೆದಿರುತ್ತಾರೆ.

**ಉತ್ತರ:** ಅಧ್ಯಕ್ಷರಾದ ನಾನು ಬ್ಯಾಂಕಿನ ಹಿತ ಕಾಪಾಡುವುದು ಮೊದಲ ಆದ್ಯತೆ ಬ್ಯಾಂಕಿನಲ್ಲಿ ಪರಸ್ಪರ ಕೌಂಟರ್ ಳಿಗೆ ವರ್ಗಾಹಿಸುವುದು ಸಾಮಾನ್ಯ ಆಗ ಕೆಲಸ ಬರದೆ ಇರುವ ಸಿಬ್ಬಂದಿಗಳು Valentary Retirement ತೆಗೆದು ಕೊಂಡಿರಬಹುದು ಆದ್ದರಿಂದ ಇದು ಸುಳ್ಳು ಆರೋಪ, ಆದಾರ ರಹಿತವಾದ ಆರೋಪವಾಗಿದೆ.

ಆ) Professional Director ಇಬ್ಬರು ಇರುವಾಗ ಸಲಹೆಗಾರರ ಅವಶ್ಯಕತೆ ಇದೆಯಾ ?

**ಉತ್ತರ:** ಅವಶ್ಯಕತೆ ಇರುವುದಕ್ಕೆ ಆಡಳಿತ ಮಂಡಳಿ ಸಲಹೆಗಾರರನ್ನು ನೇಮಕ ಮಾಡಲಾಗಿದೆ ಆದರೆ ಇಬ್ಬರು ಪ್ರಪೋಷನಲ್ ಡೈರೆಕ್ಟರ್ ದೈನಂದಿನ ವ್ಯವಹಾರ ನೋಡುವುದು ಕಷ್ಟವಾಗುತ್ತದೆ ಆದ್ದರಿಂದ ಇವರನ್ನು ನೇಮಕ ಮಾಡಿದ್ದೇವೆ ಇವರು ಅದಿಕಾರ ಅವಧಿಯವರೆವಿಗೂ ಮುಂದುವರೆಯುತ್ತಾರೆ ಎಂದು ತಿಳಿಸಿದರು.

ಇ) ಇವರಿಗೆ ತಿಂಗಳಿಗೆ ರೂ. 20,000/– ತಿಂಗಳಿಗೆ 2–3 ದಿನ ಬರುವುದಕ್ಕೆ ಬ್ಯಾಂಕಿನ ವಾಹನದಲ್ಲಿ ಇವರಿಗೆ pick up drop.

**ಉತ್ತರ:** ತಿಂಗಳಿಗೆ 6 ರಿಂದ 7 ಬಾರಿ ಬ್ಯಾಂಕಿಗೆ ಬಂದು ಎಲ್ಲಾ ಸಿಬ್ಬಂದಿಯವರಿಂದ ಬ್ಯಾಂಕಿನ ವಹಿವಾಟಿನ ಬಗ್ಗೆ ಮಾಹಿತಿ ಪಡೆದು ಸಿ.ಈ.ಓ ಜೊತೆ ಕೆಲಸ ನಿರ್ವಹಿಸುತ್ತಾರೆ ಅಲ್ಲದೆ ವಸೂಲಾತಿ ಕುರಿತು ವಿಷೇಶಗಮನ ಹರಿಸಿ ಎಂದು ಸಿಬ್ಬಂದಿಯವರಿಗೆ ಸಲಹೆ ನೀಡುತ್ತಿರುತ್ತಾರೆ ಅಲ್ಲದೆ ಸಾಲದ ಕಡತಗಳನ್ನು ಪರಿಶೀಲಿಸಿ ಸಲಹೆಯನ್ನು ಶಾಖಾ ವ್ಯವಸ್ಥಾಪಕರಿಗೆ ನೀಡುತ್ತಾರೆ ಎಂದು ಹೇಳಿದರು.

ಈ) ಯತೀಶ್ ಮತ್ತು ಸುರೇಶ್ ರವರು ಚುನಾವಣಾ ನೀತಿಯ ಅಂಶಗಳಲ್ಲಿ

Disqualified ಆಗಿದ್ದರೂ ಇಂತಹವರನ್ನು Co-op ಮಾಡಿ ಕೊಂಡಿರುತ್ತಾರೆ. ಇವರಿಂದ ಬ್ಯಾಂಕಿಗೆ ನಷ್ಟ ಉಂಟಾಗಿರುತ್ತದೆ.

**ಉತ್ತರ:** ಈಗಾಗಲೆ ಶ್ರೀ. ಯತೀಶ್ ರವರನ್ನು ನಿರ್ದೇಶಕ ಸ್ಥಾನದಿಂದ ಕೈಬಿಡಲಾಗಿದೆ ಅಲ್ಲದೆ ಸುರೇಶ ಟಿ. ಹೆಚ್. ರವರ ಕುರಿತು ತಾವು ಈಗಾಗಲೆ ನ್ಯಾಯಾಲಯಕ್ಕೆ ದೂರು ನೀಡಿರುವುದರಿಂದ ನ್ಯಾಯಾಲಯದ ಆದೇಶದಂತೆ ಕ್ರಮ ಕೈಗೊಳ್ಳಲಾಗುವುದು.

3. ಶ್ರೀ. ಶಿವಲಿಂಗಸ್ವಾಮಿ ರವರು ಮಾತನಾಡಿ ಬ್ಯಾಂಕಿನಲ್ಲಿ ನಡೆದಿದೆ ಎನ್ನಲಾದ ಸಾಲದ ಹಗರಣವನ್ನು ಸಿ.ಸಿ.ಬಿ ಗೆ ವಹಿಸಬೇಕೆಂದು ಆಗ್ರಹ ಪಡಿಸಿದರು.

**ಉತ್ತರ:** ಈ ಕುರಿತು ಅಧ್ಯಕ್ಷರು ಮಾತನಾಡಿ ಶ್ರೀ.ಶಿವಲಿಂಗಸ್ವಾಮಿ ಮತ್ತು ಇತರೆ 70 ಜನ ಸದಸ್ಯರು ಜಂಟಿ ನಿಬಂಧಕರು ಪಟ್ಟಣ ಬ್ಯಾಂಕುಗಳ ವಿಭಾಗ, ಇವರಿಗೆ ಬ್ಯಾಂಕಿನಲ್ಲಿ ಏಜೆಂಟರ ಮೂಲಕ ಸುಮಾರು 2 ರಿಂದ 4 ಕೋಟಿ ಹಣವನ್ನು ಅಧ್ಯಕ್ಷರು ಮತ್ತು ಸಿ,ಈ.ಓ ರವರು ಜಂಟಿಯಾಗಿ ಅಕ್ರಮ ಎಸಗಿದ್ದಾರೆ ಎಂದು ದಿನಾಂಕ:16.08.2023 ರಂದು ದೂರು ಸಲ್ಲಿಸಿದ್ದೀರಿ ಈ ಕುರಿತು ಪ್ರಕರಣ ವಿಚಾರಣೆ ಹಂತದಲ್ಲಿ ಇದೆ ಆದ್ದರಿಂದ ದೂರು ಇತ್ಯರ್ಥವಾದ ಮೇಲೆ ಸಿ.ಸಿ.ಬಿ ಗೆ ಪ್ರಕರಣ ವಹಿಸುವ ಕುರಿತು ಕಾನೂನು ಸಲಹೆ ಪಡೆದು ಮುಂದಿನ ಆಡಳಿತ ಮಂಡಳಿಯಲ್ಲಿ ಚರ್ಚಿಸಿ ಕ್ರಮ ಕೈಗೊಳ್ಳಲಾಗುವುದು ಎಂದು ಹೇಳಿದರು.

ಮುಂದುವರೆದು ಬ್ಯಾಂಕಿನ ಸದಸ್ಯರಾದ ಶ್ರೀ. ಶಿವಲಿಂಗಯ್ಯರವರು (M NO:4808) ಮಾತನಾಡಿ ಮೇಲ್ಕಂಡ ವಿಷಯಕ್ಕೆ ಅಧ್ಯಕ್ಷರು ಈಗಾಗಲೆ ಉತ್ತರ ನೀಡಿದ್ದಾರೆ ಅಲ್ಲದೆ ಈ ಕುರಿತು ಆಡಳಿತ ಮಂಡಳಿಯವರು ಕಾನೂನು ಸಲಹೆ ಪಡೆದು ತೀರ್ಮಾನಿಸಲು ಸಲಹೆ ನೀಡಿದರು.

ಬಿ. ಬ್ಯಾಂಕಿನ ಧಾಖಲೆಗಳನ್ನು ಅಕ್ರಮವಾಗಿ ಪಡೆದು ಬ್ಯಾಂಕಿನ ವಿರುದ್ದ ಆದಾರ ರಹಿವಾದ ಆರೋಪ ಮಾಡಿದ ಕುರಿತು ಹಾಗು ಬ್ಯಾಂಕಿನ ದಾಖಲೆ ಬ್ಯಾಂಕಿನಿಂದ ಹೊರಗಡೆ ಇರುವ ದೂರುದಾರರಿಗೆ ಹೇಗೆ ದೊರಕಿದವು ಎಂಬುದರ ಕುರಿತು ಸಂಭಂದಪಟ್ಟ ಪೋಲೀಸ್ ಠಾಣೆ, ಸೈಬರ್ ಕ್ರೈಂ ಗೆ ದೂರು ಸಲ್ಲಿಸಲು ಹಾಗು ಸಿ ಸಿ ಬಿ ಗೆ ನೀಡಲು ಅಧ್ಯಕ್ಷರು ಸಭೆಯನ್ನು ಕೋರಿದರು ಸಭೆಯಲ್ಲಿ ಹಾಜರಿದ್ದ ಎಲ್ಲಾ ಸದಸ್ಯರು ಇದರ ಕರಿತು ಸಮಗ್ರ ತನಿಖೆ ನಡೆಸಲು ಸಮ್ಮಿತಿ ಸೂಚಿಸಿದರು.

ಸಿ. ಬ್ಯಾಂಕಿನ ವಿರುದ್ದ ಈ ರೀತಿ ಸುಳ್ಳು ಆರೋಪ ಮಾಡಿ ಬ್ಯಾಂಕಿನಹಿತಾಸಕ್ತಿಗೆ ದಕ್ಕೆ ತರುತ್ತಿರುವ ಹಾಗು ಬ್ಯಾಂಕಿಗೆ ಆರ್ಥಿಕ ನಷ್ಟ ಉಂಟು ಮಾಡುತ್ತಿರುವ ಹಾಗು ಬ್ಯಾಂಕಿನ ಕುರಿತು ಅಪಪ್ರಚಾರ ಮಾಡುತ್ತಿರುವ ಶ್ರೀ.ಶಿವಲಿಂಗಸ್ವಾಮಿ, (ಸ.ಸಂಖ್ಯೆ:4551) ಚಂದ್ರಶೇಖರಯ್ಯ, (ಸ.ಸಂಖ್ಯೆ:4817) ಗುರುಸ್ವಾಮಿ, (ಸ.ಸಂಖ್ಯೆ:5623) ಎಂ.ಪಿ. ಪುಟ್ಟಸ್ವಾಮಿ, (ಸ.ಸಂಖ್ಯೆ:9838) ಹರ್ಷಿತಾ ಗಾಂದಿ, (ಸ.ಸಂಖ್ಯೆ:9914) ಸಿದ್ದರಾಜು ಡಿ. (ಸ.ಸಂಖ್ಯೆ:9469) ರವರನ್ನು ಸದಸ್ಯತ್ವದಿಂದ ವಜಾಮಾಡವ ಕುರಿತು ದಿನಾಂಕ: 14/09/2023 ರಂದು ನಡೆದ ಆಡಳಿತ ಮಂಡಳಿ ಸಭೆಯು ತೀರ್ಮಾನಿಸಿರುವುದರಿಂದ ಸದರಿ ತೀರ್ಮಾನದಂತೆ ಸಹಕಾರ ಸಂಘಗಳ ಜಂಟಿ ನಿಭಂಧಕರಿಗೆ ಪತ್ರ ಬರೆಯುವುದಾಗಿ ಸಭೆಗೆ ಕೋರಿದರು ನಂತರ ಸಭೆಯು ಬ್ಯಾಂಕಿನ ಹಿತದೃಷ್ಟಿಯಿಂದ ಒಪ್ಪಿಗೆಗೆ ಸಂಘಗಳ ಜಂಟಿ ನಿಭಂಧಕರಿಗೆ ಪತ್ರ ಬರೆಯಲು ಒಪ್ಪಿಗೆ ಸೂಚಿಸಿತು.

14. ವಂದನಾರ್ಪಣೆ:

ಬ್ಯಾಂಕಿನ ನಿರ್ದೇಶಕರು ಶ್ರೀ ಸಿ. ದೊಡ್ಡೀರಯ್ಯರವರು ವಂದನಾರ್ಪಣೆ ಮಾಡುತ್ತಾ ಪ್ರಸಕ್ತ ಸಾಲಿನಲ್ಲಿ ಭಾರತೀಯ ರಿಸರ್ವ್ ಬ್ಯಾಂಕ್ ಮತ್ತು ಸಹಕಾರ ಇಲಾಖೆಯ ಅಧಿಕಾರಿಗಳಿಗೆ ಮಾರ್ಗದರ್ಶನಕ್ಕಾಗಿ ಬ್ಯಾಂಕಿನ ಆಡಳಿತ ಮಂಡಳಿಯು ಅಭಾರಿಯಾಗಿರುತ್ತದೆ. ಶಾಸನಬದ್ಧ

ಲೆಕ್ಕಪರಿಶೋಧಕರು, ಆಂತರಿಕ ಲೆಕ್ಕಪರಿಶೋಧಕರು, ಬ್ಯಾಂಕಿನ ಕಾನೂನು ಸಲಹೆಗಾರರು, ಕಟ್ಟಡ ಮೌಲ್ಯ ನಿರ್ಣಯಕಾರರು, ಆಭರಣ ಮೌಲ್ಯಮಾಪಕರು, ಕಂಪ್ಯೂಟರ್ ನಿರ್ವಹಣೆಯ ಸಾಫ್ಟ್‌ವೇರ್ ಮತ್ತು ಹಾರ್ಡ್‌ವೇರ್ ಕಂಪನಿಯ ಎಲ್ಲಾ ಅಧಿಕಾರಿ ವರ್ಗದವರಿಗೆ,ಬ್ಯಾಂಕಿನ ಸರ್ವತೋಮುಖ ಅಭಿವೃದ್ಧಿಗೆ ಕಾರಣರಾದ ಎಲ್ಲಾ ಸದಸ್ಯ ಬಂದುಗಳಿಗೆ ಹಾಗು ಆಡಳಿತ ಮಂಡಲಿಯ ಎಲ್ಲಾ ನಿರ್ದೇಶಕರುಗಳಿಗೆ, ಸಲಹೆಗಾರರಿಗೆ, ಬ್ಯಾಂಕಿನ ಸಿಬ್ಬಂದಿ ವರ್ಗದವರ ಪ್ರಾಮಾಣಿಕ ಸೇವೆಯನ್ನು ಕೂಡ ಈ ಸಂದರ್ಭದಲ್ಲಿ ನೆನೆಯುವುದು ತೀರಾ ಅಗತ್ಯ, ಗ್ರಾಹಕರಿಗೂ, ತೈಷಿಗಳಿಗೂ, ಹಾಗು ಪ್ರತ್ಯಕ್ಷ ಹಾಗು ಪರೋಕ್ಷವಾಗಿ ಸಹಕರಿಸಿದ ಎಲ್ಲಾ ಮಹನೀಯರಿಗೂ ನಮ್ಮ ಹೃತ್ಪೂರ್ವಕ ಧನ್ಯವಾದಗಳನ್ನು ತಿಳಿಸಿದರು ಸಭೆಯಲ್ಲಿ ಭಾಗವಹಿಸಿ ಕಾರ್ಯಕ್ರಮ ಯಶಸ್ವಿಗೊಳಿಸಿದಕ್ಕೆ ಸಭೆಯು ಶಾಂತಿಯುತವಾಗಿ ನಡೆಯುವಲ್ಲಿ ಸಹಕರಿಸಿದ ಎಲ್ಲಾ ಪೋಲೀಸ್ ಸಿಬ್ಬಂದಿಯವರಿಗೆ, ಬೆಸ್ಕಾಂ ಸಿಬ್ಬಂದಿಯವರಿಗೂ ಬಿ.ಡಿ.ಎ ಅಧಿಕಾರಿಯವರಿಗೂ. ಬಿ.ಬಿ.ಎಂ.ಪಿ ಅಧಿಕಾರಿ ಮತ್ತು ಸಿಬ್ಬಂದಿಯವರಿಗೂ ಎಲ್ಲಾ ಪೋಲೀಸ್ ಸಿಬ್ಬಂದಿಯವರಿಗೆ, ಬೆಸ್ಕಾಂ ಸಿಬ್ಬಂದಿಯವರಿಗೂ ಬಿ.ಡಿ.ಎ ಅಧಿಕಾರಿಯವರಿಗೂ. ಬಿ.ಬಿ.ಎಂ.ಪಿ ಅಧಿಕಾರಿ ಮತ್ತು ಸಿಬ್ಬಂದಿಯವರಿಗೂ ಎಲ್ಲರಿಗೂ ಧನ್ಯವಾದಗಳನ್ನು ತಿಳಿಸಿದರು.

**ರಾಷ್ಟ್ರಗೀತೆಯೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು**

| | |
|---|---|
| ಸಹಿ/– | ಸಹಿ/– |
| **ಕಾರ್ಯದರ್ಶಿ** | **ಅಧ್ಯಕ್ಷರು** |



Meditate.

Live purely. Be quiet.

Do your work with mastery.

Like the moon, come out

from behind the clouds!

Shine

— Siddhārtha Gautama

# ಆನಂದ ಕೋ-ಆಪರೇಟಿವ್ ಬ್ಯಾಂಕ್ ಲಿ.,

ಆಡಳಿತ ಕಛೇರಿ : ನಂ. 116, 1ನೇ ಮಹಡಿ, 2ನೇ ಮುಖ್ಯರಸ್ತೆ, ಶೇಷಾದ್ರಿಪುರಂ, ಬೆಂಗಳೂರು – 560 020

## 2023–2024ನೇ ಸಾಲಿನ ವಾರ್ಷಿಕ ವರದಿ

**ಮಾನ್ಯ ಸದಸ್ಯರೇ**

ವರ್ಷದ ಸದಾಕಾಲವೂ ಅತ್ಯುತ್ತಮ ಹವಾಗುಣವನ್ನು ಹೊಂದಿ ಉದ್ಯಾನ ನಗರವಾಗಿ ಬೆಳೆಯುತ್ತಿರುವ ಈ ಬೆಂಗಳೂರು ನಗರದ ಹೆಮ್ಮೆಯ ನಿವಾಸಿಗಳಾಗಿರುವ ಹಾಗೂ ಈ ಪ್ರತಿಷ್ಠಿತ ಬ್ಯಾಂಕಿನ ಸದಸ್ಯರುಗಳಾಗಿರುವ ತಮ್ಮನ್ನು ಬ್ಯಾಂಕಿನ 43ನೇ ಸರ್ವಸದಸ್ಯರ ಸಾಮಾನ್ಯ ಮಹಾಸಭೆಗೆ ಆತ್ಮೀಯವಾಗಿ ಸ್ವಾಗತಿಸುತ್ತಾ, 2023–2024ನೇ ಸಾಲಿನ ವಾರ್ಷಿಕ ವರದಿ ಮತ್ತು ಲೆಕ್ಕ ಪತ್ರಗಳನ್ನು ಆಡಳಿತ ಮಂಡಲಿ ಪರವಾಗಿ ತಮ್ಮ ಮುಂದಿಡಲು ಹರ್ಷಿಸುತ್ತೇನೆ. ಯಾವುದೇ ವ್ಯಕ್ತಿಗೆ ಸಮಾಜದಲ್ಲಿ ಸೂಕ್ತ ಸ್ಥಾನಮಾನ ಲಭ್ಯವಾಗಬೇಕಾದಲ್ಲಿ ಇಂತಹ ಸಾರ್ವಜನಿಕ ಸಂಸ್ಥೆಗಳನ್ನು ಕಟ್ಟಿ ಬೆಳೆಸುವುದು ಅತಿ ಮುಖ್ಯವಾಗಿರುತ್ತದೆ. ಇಂತಹ ಒಂದು ಸಂಸ್ಥೆ ನೂರಾರು ಸ್ಥಿತಿವಂತ ಗಣ್ಯ ವ್ಯಕ್ತಿಗಳಿಗಿಂತಲೂ ಹೆಚ್ಚಿನದಾಗಿರುತ್ತದೆ. ಆದ್ದರಿಂದ ಈ ಪ್ರತಿಷ್ಠಿತ ಬ್ಯಾಂಕನ್ನು ಪ್ರಗತಿಯತ್ತ ಸಾಗುವಂತೆ ಮಾಡಲು ಪ್ರತಿಯೊಬ್ಬ ಸದಸ್ಯರೂ ಸಹ ಶ್ರಮಿಸಬೇಕೆಂದು ಕಳಕಳಿಯಿಂದ ಪ್ರಾರ್ಥಿಸುತ್ತೇನೆ.

**2. ಚಿರಸ್ಮರಣೆ :**

ನಮ್ಮ ಬ್ಯಾಂಕಿನ ಸಸಸ್ಯರಾಗಿದ್ದ ಕೆಳಕಂಡ ಸದಸ್ಯರು ವರದಿ ಸಾಲಿನಲ್ಲಿ ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಅವರ ಆತ್ಮಕ್ಕೆ ಶಾಂತಿ ದೊರಕಲಿ ಹಾಗೂ ಅವರ ಕುಟುಂಬ ವರ್ಗದವರಿಗೆ ದುಃಖವನ್ನು ಭರಿಸುವ ಶಕ್ತಿಯನ್ನು ಭಗವಂತನು ನೀಡಲಿ.

| ಕ್ರ. ಸಂ. | ದೈವಾಧೀನರಾದವರ ಹೆಸರು | ಸದಸ್ಯತ್ವದ ಸಂಖ್ಯೆ |
|---|---|---|
| 1 | ರಾಮೇಗೌಡ ಹೆಚ್.ಎನ್. | ಎ. 1763 |
| 2 | ವೆಂಕಟರಮಣ ಎಸ್. | ಆರ್. 5693 |
| 3 | ಕೃಷ್ಣಯ್ಯ ಎನ್. | ಆರ್. 10420 |
| 4 | ಚಂದ್ರಶೇಖರ್ ಎಂ. | ಆರ್. 2095 |
| 5 | ನಾಗರಾಜು ಎಂ. | ಆರ್. 5605 |
| 6 | ಸಂಪತ್ ಕುಮಾರ್ ಹೆಚ್.ಬಿ. | ಆರ್. 4246 |
| 7 | ದೊಡ್ಡಯ್ಯ | ಆರ್. 5130 |
| 8 | ತಾಯಮ್ಮ | ಆರ್. 804 |

| ಕ್ರ. ಸಂ. | ದೈವಾಧೀನರಾದವರ ಹೆಸರು | ಸದಸ್ಯತ್ವದ ಸಂಖ್ಯೆ |
|---|---|---|
| 9 | ರೇಣುಕಾ ಬಿ.ಎಸ್. | ಆರ್. 3200 |
| 10 | ಕೃಷ್ಣಮೂರ್ತಿ ಜಿ. | ಆರ್. 6259 |
| 11 | ಚಂದ್ರಮೋಹನ್ ಎಸ್. | ಆರ್. 10345 |
| 12 | ಲೀಲಾವತಿ | ಆರ್. 763 |
| 13 | ಬಾಲರಾಜ್ ಎಂ.ಕೆ. | ಆರ್. 3765 |
| 14 | ಹೊಂಬಾಳಯ್ಯ | ಆರ್. 5459 |
| 15 | ಚಿಕ್ಕರಂಗಯ್ಯ | ಆರ್. 6398 |

**3. ಸದಸ್ಯತ್ವ ಮತ್ತು ಷೇರು ಬಂಡವಾಳ**

